

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTI BASAVANTAPPA HOSAMANI

Cell : +91 9741319119

Volume : 06 Issue : 275 Thursday 11-07-2024 E-mail : maruti.b.hosamani76@gmail.com Page: 4 Price : Rs. 1/-


## ಒಳ ಮೀಸಲಾತಿಯ ಹೋರಾಟಗಾರ ಪಾರ್ಥ ಸಾರಥಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಕೆ



**ಮಸ್ಕಿ:** ದಲಿತ ಚಳುವಳಿಯ ಒಡನಾಡಿ ಒಳ ಮೀಸಲಾತಿಯ ಹೋರಾಟಗಾರ ಪಾರ್ಥ ಸಾರಥಿಯವರು ತುಮಕೂರುನಲ್ಲಿ ನಿಧನ ಹೊಂದಿದ್ದು ಅವರಿಗೆ ಮಸ್ಕಿಯ ಗಾಂಧಿನಗರದ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಪಾರ್ಕಿನಲ್ಲಿ ಅವರಿಗೆ ಭಾವಪೂರ್ಣ ಶ್ರದಾಂಜಲಿಯನ್ನು ಮಸ್ಕಿಯ ದಲಿತ ಸಂಘಟನೆಯ ಮುಖಂಡ ದೊಡ್ಡಪ್ಪ ಮುರಾರಿ ರವರು ಮಾಲಾರ್ಪಣೆಯನ್ನು ಮಾಡಿ ಅವರ ಹೋರಾಟದ ಬಗ್ಗೆ ಮಾತನಾಡಿದರು.

ಈ ಸಂದರ್ಭದಲ್ಲಿ ದಲಿತ ಮುಖಂಡರುಗಳಾದ ಮೌನೇಶ್ ಜಿ ಮುರಾರಿ ಪುರಸಭೆ ಮಾಜಿ ಅಧ್ಯಕ್ಷರು, ಮಲ್ಲಯ್ಯ ಬಳ್ಳಾ, ಹನುಮಂತ ಪರಾಪುರ, ಯಮನಪ್ಪ ಮುದಗಲ್, ಕಾಸಿಮಪ್ಪ ಡಿ ಮುರಾರಿ ಡಿ ಎಸ್ ಎಸ್ ತಾಲೂಕು ಸಂಚಾಲಕರು, ಅಶೋಕ್ ಡಿ ಮುರಾರಿ,ಕಿರಣ್ ವಿ ಮುರಾರಿ, ಬಾಲಸ್ವಾಮಿ ಜಿನ್ನಾಪುರ, ತುರುಮುಂದೆ ಪ್ಪಕಟ್ಟಿಮನಿ, ವೆಂಕಟೇಶ್ ಮುರಾರಿ, ಸಿದ್ದಪ್ಪ ಹೂವಿನಭಾವಿ, ಮೋಹನ್ ಎಂ ಮುರಾರಿ, ಮಲ್ಲಿಕಾರ್ಜುನ ಕೊಠಾರಿ,ಮರಿಸ್ವಾಮಿ ಬೆನಕನಾಳ್ ಬಸವರಾಜ್ ಆರ್ ಡಿ ಉದ್ಬಾಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರತಾಪ್ ವಾಯ್ ಕಿಳ್ಳಿ.ಇಲಕಲ್ಲ.**

## ಅಸ್ಕಿ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ಎಂ. ಮೋಹನ್ ರಾವ್ ರವರಿಗೆ ರೈತರಿಂದ ಸನ್ಮಾನಿಸಿ ಗೌರವಿಸಿದರು

**ಅಸ್ಕಿ :** ತಾಳಿಕೋಟೆ ತಾಲೂಕಿನ ಅಸ್ಕಿ ಗ್ರಾಮದ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್.ಎಂ. ಮೋಹನ್ ರಾವ್ ಇವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಇವರ ವತಿಯಿಂದ ಗೌರವ ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ರೈತ ಸಂಘ ತಾಲೂಕ ಅಧ್ಯಕ್ಷರಾದ ಶ್ರೀಶೈಲ್ ವಾಲಿಕಾರ್ ಇವರು ಈ ಬ್ಯಾಂಕಿನ ಮ್ಯಾನೇಜರ್ ಸಾಹೇಬರು ನಮ್ಮ ರೈತರಿಗೆ ಒಳ್ಳೆ ಮಾರ್ಗದರ್ಶಕ ಆಗಿದ್ದಾರೆ ಯಾವುದೇ ರೈತರ ಬಗ್ಗೆ ಸಾಲ ಬೇಕಾದರೆ ರೈತರಿಗೆ ಬಹಳ ಬೆಂಗಾವಲಾಗಿ ರೈತರಿಗೆ ಸಲಹೆ ನೀಡಿದ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ಸಾಹೇಬರಿಗೆ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. ಮತ್ತು ರೈತ ಸಂಘದ ಅಧ್ಯಕ್ಷರಾದ ಮೈಬೂಬಬಾಷ ಮನಗೂಳಿ ಇವರು ಕೂಡ ಅಸ್ಕಿ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ಸಾಹೇಬರಿಗೆ ಶಾಲು ಸನ್ಮಾನ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು.

ಈ ವೇಳೆ ಕಲಿಕೇರಿ ಗ್ರಾಮದ ರೈತ ಮುಖಂಡರಾದ ಶರಣು ಕೌದಿ ಅಸ್ಕಿ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ಸಾಹೇಬರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ರಾಘವೇಂದ್ರ ಸರ್ ಫೀಲ್ಡ್ ಆಫೀಸರ್. ಶಿವು ಹೂಸೂರ್. ಯಮನಪ್ಪ ಬನ್ನಟ್ಟಿ. ಅನೇಕ ರೈತ ಬಾಂಧವರು ಪಾಲ್ಗೊಂಡಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ.**

## ಗ್ರಾಮೀಣ ಕುಡಿಯುವ ನೀರು ಮತ್ತು ನಗರ ನೀರು ಮತ್ತು ಸರಬರಾಜು ಅಧಿಕಾರಿಗಳನ್ನು ಸಭೆಯಲ್ಲಿ ತರಾಟೆಗೆ ತೆಗೆದುಕೊಂಡ: ಶಾಸಕ ಕಾಶಪ್ಪನವರ

**ಹುನಗುಂದ :** ಹುನಗುಂದ ಮತ್ತು ಇಳಕಲ್ಲ ಅವಳಿ ತಾಲೂಕಿನ 158 ಶುದ್ಧ ಕುಡಿಯುವ ನೀರು ಘಟಕಗಳಲ್ಲಿ ಬಹತೇಕ ಘಟಕಗಳು ದುರಸ್ಥಿಯಲ್ಲಿದ್ದು. ಅವುಗಳನ್ನು ದುರಸ್ಥಿಗೊಳಿಸುವಂತೆ ಕಳೆದ ಕೆಡಿಪಿ ಸಭೆಯಲ್ಲಿ ಹೇಳಿದ್ದರೂ ದುರಸ್ಥಿಗೆ ಕ್ರಮ ವಹಿಸದೇ ಇರುವ ಗ್ರಾಮೀಣ ಕುಡಿಯುವ ನೀರು ಹಾಗೂ ಸರಬರಾಜು ಇಲಾಖೆಯ ಎಇಇ ರಾಘವೇಂದ್ರ ಪುರೋಹಿತ ಮತ್ತು ಇಳಕಲ್ಲ ನಗರದಲ್ಲಿ ಕ್ರೀಡಾಂಗಣ ಜಾಗೆಯಲ್ಲಿ ಸಂಬಂಧಿಸಿದ ಇಲಾಖೆಯ ಅನುಮತಿಯಿಲ್ಲದೇ ಕುಡಿಯುವ ನೀರಿನ ಟ್ಯಾಂಕರ್ ಕಾಮಗಾರಿ ಕೈಕೊಂಡ ಎಡಬ್ಲೂಎಸ್ ಮಹಿಳಾ ಅಧಿಕಾರಿಯನ್ನು ಶಾಸಕ ವಿಜಯಾನಂದ ಕಾಶಪ್ಪನವರ ಸಭೆಯಲ್ಲಿ ತರಾಟೆಗೆ ತಗೆದುಕೊಂಡು ಘಟನೆ ನಡೆಯಿತು.



ಬುಧವಾರ ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಹುನಗುಂದ ಮತ್ತು ಇಳಕಲ್ಲ ಅವಳಿ ತಾಲೂಕಿನ ವಿವಿಧ ಇಲಾಖೆಯ ತ್ರೈಮಾಸಿಕ ಪ್ರಗತಿ ಪರಿಶೀಲನೆ (ಕೆಡಿಪಿ) ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದ ಅವರು, ಅವಳಿ ತಾಲೂಕಿನಲ್ಲಿ ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಜೆಜೆಎಂ ಕಾಮಗಾರಿ ಸಂಪೂರ್ಣ ಹಳ್ಳ ಹಿಡಿದಿದ್ದು. ಅವಳಿ ತಾಲೂಕಿನ ಜನರಿಗೆ ಶುದ್ದ ಕುಡಿಯುವ ನೀರನ್ನು ಪೂರೈಸಲು ಕಳೆದ ನಮ್ಮ ಸರ್ಕಾರದ ಅವಧಿಯಲ್ಲಿ ನಿರ್ಮಾಣವಾಗಿರುವ 158 ಶುದ್ದ ಕುಡಿಯುವ ನೀರಿನ ಘಟನೆಗಳನ್ನು ರಿಪೇರಿ ಮಾಡಿಸಿ ಜನರಿಗೆ ಅನುಕೂಲ ಮಾಡಿಕೊಂಡಿ ಎಂದು ಹೇಳಿತ್ತು ಏನು ಮಾಡಿದೀರಿ ? ಎಂದು ಶಾಸಕರು ಆರ್ಡಬ್ಲೂಎಸ್ ಎಇಇ ಪುರೋಹಿತರನ್ನು ಕೇಳಿದಾಗ ಸರಿಪಡಿಸಲಾಗುತ್ತಿದೆ ಎಂದು ಹೇಳುತ್ತಿದಂತೆ ವಿವಿಧಹಳ್ಳಿಯ ಸಾರ್ವಜನಿಕರು ನಮ್ಮೂರಲ್ಲಿ ಒಂದು ವರ್ಷದಿಂದ ನೀರಿನ ಘಟಕ ಬಂದ್ ಎಂದು ಹೇಳುತ್ತಿದಂತೆ ಗರಂ ಗೊಂಡ ಶಾಸಕರು ಪುರೋಹಿತ ಅವರನ್ನು ತರಾಟೆಗೆ ತಗೆದುಕೊಂಡು ಅವುಗಳನ್ನು ಮೊದಲು ಸರಿಪಡಿಸುವ ಕಾರ್ಯವನ್ನು ಮಾಡಿ ಎಂದು ಖಡಕ್ ವಾರ್ನಿಂಗ್ ಮಾಡಿದರು. ಇನ್ನು ಇಳಕಲ್ಲ ನಗರದಲ್ಲಿ ಮೊದಲು ಇದ್ದ ಕುಡಿಯುವ ನೀರಿನ ಟ್ಯಾಂಕರ್ನ್ನು ಹೊಡೆದು ಹಾಕಿ ಬೇರೆಡೆಗೆ ಸಂಬಂಧಿಸಿದ ಕ್ರೀಡಾ ಇಲಾಖೆಯ ಅನುಮತಿಯನ್ನು ಪಡೆಯದೇ ಕಾಮಗಾರಿಯನ್ನು ಆರಂಭಿಸುತ್ತಿರುವ ಎಡಬ್ಲೂಎಸ್ ಅಧಿಕಾರಿಯನ್ನು ತರಾಟೆಗೆ ತಗೆದು–ಕೊಂಡು ಆ ಜಾಗೆ 2018 ರಲ್ಲಿ ಕ್ರೀಡಾಂಗಣ ಹೆಸರಿಗೆ ಹಸ್ತಾಂತರವಾಗಿದ್ದರೂ ಅವರುಗಳ ಅನುಮತಿಯನ್ನು ಕೇಳದೇ ಮಾಜಿ ಶಾಸಕ ದೊಡ್ಡನಗೌಡ ಪಾಟೀಲರ ಮಾತನ್ನು ಕೇಳಿ ಅನಧೀಕೃತವಾಗಿ ಕಾಮಗಾರಿ ನಡೆಸಿದ್ದೀರಲ್ಲ ನಾನು ಹೇಳಿತ್ತೀನಿ ಅದರಂಗ ಮಾಡ್ತೀರಾ ಎಂದು ಕೇಳಿದಕ್ಕೆ ಎಡಬ್ಲೂಎಸ್ ಅಧಿಕಾರಿ ತುಟಿ ಪಿಟಕೆನ್ನದೇ ಸುಮ್ನೆ ನಿಂತ ಘಟನೆ ನಡೆಯಿತು.

ಇನ್ನು ಕೃಷಿ ಇಲಾಖೆಯ ಅಧಿಕಾರಿ ಸೋಂಲಿಂಗಪ್ಪ ಅಂಟರತಾಣಿ ಕಳೆದ ಸಭೆಯ ಅನುಪಾಲನ ವರದಿಯನ್ನು ಹೇಳಿದೇ ಇರುವುದ್ದಕ್ಕೆ ಮತ್ತು ಬೆಳೆ ಪರಿಹಾರದ ಬಗ್ಗೆ ಸರಿಯಾದ ಮಾಹಿತಿಯನ್ನು ಸಭೆಗೆ ಹಾಜರ ಪಡಿಸದೇ ಇರೋದರಿಂದ ಸರಿಯಾದ ಮಾಹಿತಿಯೊಂದಿಗೆ ಸಭೆಗೆ ಬರುವಂತೆ ಖಡಕ್ ಎಚ್ಚರಿಕೆ ನೀಡಿದರು. ಪಶು ಸಂಗೋಪನ ಇಲಾಖೆಯ ಎಡಿ ಎಸ್.ಪಿ ಬೇನಾಳ ಸರ್ಕಾರದ ಯೋಜನೆಯ ಬಗ್ಗೆ ರೈತರಿಗೆ ಸರಿಯಾದ ಮಾಹಿತಿ ನೀಡದಿದ್ದಕ್ಕೆ ಸರ್ಕಾರದ ಯೋಜನೆಗಳ ಬಗ್ಗೆ ಉತ್ತಮ ಅಭಿಪ್ರಾಯ ಇರಬೇಕು ಅದರ ಬಗ್ಗೆ ಇಲ್ಲ ಸಲ್ಲದ ಆರೋಪ ಸರಿಯಲ್ಲ ಎಂದು ಅವರಿಗೆ ತಿಳಿಸಿದರು. ಕೆಎಸ್ಆರ್ಟಿಸಿ ಅವರಿಗೆ ಶಾಲೆಯ ಸಮಯಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿ ಬಸ್ ಬಿಡುವಂತೆ ತಿಳಿಸಿದರು. ಲ್ಯಾಂಡ್ ಆರ್ಮಿ ಇಲಾಖೆಯಡಿಯಲ್ಲಿ ನಾಗೂರ ಗ್ರಾಮದಲ್ಲಿ 2015–16ರಲ್ಲಿ ನಿರ್ಮಿಸಲಾದ ಡಾ.ಬಿ.ಆರ್. ಅಂಬೇಡ್ಕರ ಭವನ ಇಲ್ಲಿವರಿಗೂ ಉದ್ಘಾಟನೆ ಯಾಗದೇ ಬಿದ್ದು ಹೋಗುವ ಸ್ಥಿತಿಯಲ್ಲಿದೆ ಎಂದು ನಾಗೂರ ಗ್ರಾಮದವರು ಶಾಸಕರಿಗೆ ತಿಳಿಸಿದಾಗ ಗರಂ ಗೊಂಡ ಶಾಸಕರು ಯಾ–ಕೆ ? ಇಲ್ಲಿವರಿಗೂ ಉದ್ಘಾಟಿಸಿಲ್ಲ ಎಂದು ಕೇಳಿದಾಗ ಎಲ್ಲಾ ರೆಡಿ ಇದೆ ಸಧ್ಯದಲ್ಲಿ ಉದ್ಘಾಟನೆಗೆ ವ್ಯವಸ್ಥೆ ಮಾಡಲಾಗುವುದು ಎಂದು ಅಧಿಕಾರಿ ತಿಳಿಸಿದಾಗ ಮೊದಲು ಅದರ ಸ್ಥಿತಿ ಗತಿಯನ್ನು ನೋಡಿ ಉದ್ಘಾಟನೆ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ತಾ.ಪಂ ಆಡಳಿತಾಧಿಕಾರಿ ಎನ್. ವಾಯ್. ಬಸರಿಗಿಡದ, ತಹಶೀಲ್ದಾರ ನಿಂಗಪ್ಪ ಬಿರಾದಾರ, ತಾ.ಪಂ ಇಓ ಮುರಳೀಧರ ದೇಶಪಾಂಡೆ, ಗ್ರೇಡ್–2 ತಹಶೀಲ್ದಾರ ಈಶ್ವರ ಗಡ್ಡಿ,ಕೆಡಿಪಿ ಸದಸ್ಯರಾದ ಶೇಖರಪ್ಪ ಬಾದವಾಡಗಿ, ಶಾಂತಣ್ಣ ಸುರಪೂರ, ಜಬ್ಬಾರ ಕಲಬುರ್ಗಿ, ಮಲ್ಲಿಕಾರ್ಜುನ ಲೆಕ್ಕಿಹಾಳ, ಚಂದಪ್ಪ ಮಾದರ,ವಿಜಯಮಹಾಂತೇಶಗದ್ದನಕೇರಿ ಸೇರಿದಂತೆ ಅನೇಕರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಲ್ಲಿಕಾರ್ಜುನ ಎಂ ಬಂಡರಗಲ್ಲ ಹುನಗುಂದ.**

## ಬಾಬು ಜಗಜೀವನ್ ರಾಮ್‌ರವರ 38ನೇ ಪುಣ್ಯಸ್ಮರಣೆ



**ಮುಧೋಳ :** ತಾಲೂಕಿನಲ್ಲಿ ಹಸಿರು ಕ್ರಾಂತಿಯ ಹರಿಕಾರರು, ರಾಷ್ಟ್ರ ನಾಯಕರು,ಭಾರತ ದೇಶದ ಪ್ರಥಮ ಮಾಜಿ ಉಪ ಪ್ರಧಾನಿಗಳು, ದೇಶದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಹಾಗೂ ಹಿಂದುಳಿದ ವರ್ಗಗಳ ಮತ್ತು ದಲಿತರ ಶ್ರೇಯೋಭಿವೃದ್ಧಿಗೆ ಅನುಕ್ಷಣವೂ ಶ್ರಮಿಸಿದ ಡಾ. ಬಾಬು ಜಗಜೀವನ್ ರಾಮ್ ರವರ ೩೮ನೇ ಪುಣ್ಯಸ್ಮರಣೆ ದಿನವನ್ನು ಉಪ ತಹಶೀಲ್ದಾರರು, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ನಗರಸಭೆಯ ಪೌರಾಯುಕ್ತರು, ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ವರ್ಗದವರು, ವಸತಿ ನಿಲಯಗಳ ಮೇಲ್ವಿಚಾರಕರು, ನಗರಸಭೆ ಸಿಬ್ಬಂದಿ ವರ್ಗದವರು ಹಾಗೂ ತಾಲೂಕಿನ ಸಮುದಾಯದ ಮುಖಂಡರು,ಪದಾಧಿಕಾರಿಗಳ ನೇತೃತ್ವದಲ್ಲಿ ಡಾ.ಬಾಬು ಜಗಜೀವನರಾಮ್ ರವರ ಪೋಟೋಗೆ ಪೂಜೆ ಹಾಗೂ ಪುಷ್ಪಾರ್ಚನೆ ಮಾಡುವುದರ ಮೂಲಕ ಗೌರವಪೂರ್ವಕವಾಗಿ ನಮನಗಳನ್ನು ಸಲ್ಲಿಸಲಾಯಿತು.

## ಸಕಲ ಸರ್ಕಾರಿ ಗೌರವದೊಂದಿಗೆ ಯೋಧ ರಾಜು ಕರಜಗಿ ಅಂತ್ಯಕ್ರಿಯೆ



**ತಿಕೋಟಾ :** ಜಮ್ಮು ಮತ್ತು ಕಾಶ್ಮೀರದಲ್ಲಿ ಗಡಿ ಕಾಯುವಾಗ ವೀರ ಮರಣ ಹೊಂದಿದ ಯೋಧ ರಾಜು ಗಿರಮಲ್ಲ ಕರಜಗಿ (36) ಅವರ ಅಂತ್ಯಸಂಸ್ಕಾರ ತಿಕೋಟಾ ಪಟ್ಟಣದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ನಡೆಯಿತು.

ತಿಕೋಟಾ ಗ್ರಾಮದ ನಿವಾಸಿಯಾಗಿದ್ದ ಅವರು ಜಮ್ಮು ಕಾಶ್ಮೀರದಲ್ಲಿ ಭಾರತೀಯ ಸೇನೆಯಲ್ಲಿ ಹವಾಲ್ದಾರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಅವರ ಅಂತಿಮ ಸಂಸ್ಕಾರ ನೆರವೇರಿತು. ಈ ಸಂದರ್ಭದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಅಂತಿಮ ನಮನ ಸಲ್ಲಿಸಲಾಯಿತು. ಪಟ್ಟಣದ ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳು, ಹಿರಿಯರು ಹಾಗೂ ಯುವಕರು ಉಪಸ್ಥಿತರಿದ್ದರು.

ತವರಿನಲ್ಲಿ ಬುಧವಾರ ವೀರಯೋಧ ರಾಜು ಗಿರಮಲ್ಲ ಕರ್ಜಗಿ ನಿಧನಕ್ಕೆ ಇಡೀ ಜಿಲ್ಲೆಯೆ ಕಂಬನಿ ಮಿಡಿಯಿತು.

ವಿಧಾನಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡು ಯೋಧನ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

## ಗಬ್ಬೆದ್ದು ನಾರುತ್ತಿರುವ ತೇರದಾಳ ಪಟ್ಟಣ ಡೆಂಗ್ಯೂಗೆ ಆಹ್ವಾನ ನೀಡಿದ ಪುರಸಭೆ!

**ತೇರದಾಳ:** ತೇರದಾಳ ಪಟ್ಟಣದಲ್ಲಿ ಪುರಸಭೆ ವ್ಯಾಪ್ತಿಯ ಆರೋಗ್ಯ ವಿಭಾಗ ದಿನೇ ದಿನೆ ಹದಗೆಡುತ್ತಿದ್ದು, ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಸಾಕಷ್ಟು ಸೂಚನೆ ನೀಡಿದರು ಯಾವುದೇ ಕ್ರಮ ಕೈಗೊಳ್ಳದ ಕಾರಣ ತೇರದಾಳದ ಯಾವುದೇ ವಾರ್ಡ್‌ಗೆ ತೆರಳಿದರು ದುರ್ವಾಸನೆ ಬಡಿಯುತ್ತಿದೆ. ಪಟ್ಟಣದ ಹೊರ ವಲಯದಲ್ಲಿ ಹಾದು ಹೋಗವವರಂತು ಮೂಗು ಮುಚ್ಚಿಕೊಂಡೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ.

ಡೆಂಗ್ಯೂ ಬಗ್ಗೆ ಡಿಸಿ ಅವರು ಸ್ಥಳೀಯ ಸಂಘ ಸಂಸ್ಥೆಗಳಿಗೆ ಸಾಕಷ್ಟು ಸೂಚನೆಗಳನ್ನು ನೀಡಿದೆ. ಆರೋಗ್ಯ ಇಲಾಖೆ ಕೂಡ ಜಾಗೃತಿ ಮೂಡಿಸಿದೆ. ಆದರೆ ಪುರಸಭೆಯವರ ನಿರ್ಲಕ್ಷ್ಯದಿಂದಲೇ ಡೆಂಗ್ಯೂಗೆ ಆಹ್ವಾನ ನೀಡಿದಂತೆ ಗೋಚರಿಸುತ್ತಿದೆ.

ಆಸ್ಪತ್ರೆ ಮುಂದೆಯೇ ತುಂಬಿದ ಚರಂಡಿ– ಇಲ್ಲಿನ ಗುರುದೇವ ಬ್ರಹ್ಮಾನಂದ ಆಶ್ರಮ ಹತ್ತಿರದ ಓಂ ಹಾಸ್ಪಿಟಲ್ ಬಳಿ ಇರುವ ದೊಡ್ಡ ಚರಂಡಿ ತುಂಬಿದ ಪರಿಣಾಮ ಪ್ಲಾಸ್ಟಿಕ್ ಬಾಟಲ್, ಪ್ಲಾಸ್ಟಿಕ್ ಹೀಗೆ ಹಲವು ವಸ್ತುಗಳು ರಸ್ತೆ ಮೇಲೆಯೆ ತೇಲಾಡುತ್ತಿವೆ. ಗಲೀಜು ನೀರು ತುಂಬಿದ ಪರಿಣಾಮ ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಆಸ್ಪತ್ರೆಗೆ ಬರುವ





ರೋಗಿಗಳು ಮೂಗು ಮುಚ್ಚಿಕೊಂಡು ಬರುವಂತಾಗಿದೆ. ಅಲ್ಲದೆ ಹಿಡಕಲ್ ರಸ್ತೆಗೆ ಹೊಂದಿಕೊಂಡಿರುವ ಚರಂಡಿ ಆಗಿದ್ದರಿಂದ ತೋಟದ ವಸತಿ ಜನ ಕೂಡ ದುರ್ವಾಸನೆಗೆ ಬೇಸತ್ತು ಹೋಗಿದ್ದಾರೆ.

ಚನ್ನಮ್ಮ ಸರ್ಕಲ್–ಕೆಲವರು ಇತ್ತಿಚೆಗೆ ಇದೇ ಚರಂಡಿ ಬಳಿ ರಾಣಿ ಚನ್ನಮ್ಮ ಸರ್ಕಲ್ ಎಂದು ನಾಮಕರಣ ಮಾಡಿ ಪೂಜೆ ಕೂಡ ಮಾಡಿದ್ದಾರೆ.ಆದರೆ ಸರ್ಕಲ್ ಮಾಡಿದವರು ಸರ್ಕಲ್ ಸುತ್ತ ಸ್ವಚ್ಛತೆ ಇಟ್ಟುಕೊಳ್ಳುವ ಕೆಲಸ ಮಾಡದಿರುವುದು ನಿಜಕ್ಕೂ ನೋವಿನ ಸಂಗತಿ. ವಾರ್ಡ್ ಸದಸ್ಯರು ಇಬ್ಬರು ಇದ್ದರು ಅವರೂ ಕೂಡ ಗಮನ ಹರಿಸದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಇದು ಕೇವಲ ಬ್ರಹ್ಮಾನಂದ ಆಸ್ಪತ್ರೆ ಬಳಿಯ ಸಮಸ್ಯೆ ಅಲ್ಲ. ಬದಲಾಗಿ ಪಟ್ಟಣದ ಬಹುತೇಕ ಕಡೆಗಳಲ್ಲಿ ಇದೇ ಸಮಸ್ಯೆಯಾಗಿದೆ. ಇನ್ನಾದರು ಆಡಳಿತಾಧಿಕಾರಿಗಳು ಪುರಸಭೆ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವ ಕೆಲಸ ಮಾಡುತ್ತಾರೆ ಎಂಬುದು ಕಾದು ನೋಡಬೇಕಿದೆ.

## ರೋಗದ ಚಿಕಿತ್ಸೆಗಿಂತ, ರೋಗ ತಡೆಗಟ್ಟುವ ವೈದ್ಯ–ಆದರ್ಶ ವೈದ್ಯ: ಡಾ. ಯಳಮೇಲಿ

**ಬಾಗಲಕೋಟೆ :** ರೋಗದ ಚಿಕಿತ್ಸೆ ನೀಡುವುದರ ಜೋತೆಗೆ ರೋಗ ತಡಗಟ್ಟುವ ವೈದ್ಯರೆ ಆದರ್ಶ ವೈದ್ಯರು ಎಂದು ಎಸ್.ಎನ್. ವೈದ್ಯಕೀಯ ಮಹಾವಿದ್ಯಾಲಯದ ನೂತನ ಪ್ರಾಚಾರ್ಯ ಡಾ. ಭುವನೇಶ್ವರಿ ಯಳಮೇಲಿ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ರಾಷ್ಟ್ರೀಯ ವೈದ್ಯರ ದಿನಾಚಾರಣೆ ಪ್ರಯುಕ್ತ ಆಯೋಜಿಸಿದ ಸಮಾರಂಭದಲ್ಲಿ ಸಸಿಗೆ ನೀರುನಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.




ವೈದ್ಯರು ಭೂಮಿಯ ಮೇಲಿನ ದೇವರು, ಎಂಬ ಸ್ಥಾನವನ್ನು ನಾವು ಶ್ರದ್ಧೆ – ತಾಳ್ಮೆ – ಕರುಣೆಗಳಿಂದ ಉಳಿಸಿಕೊಂಡು ಹೋಗಬೇಕಾಗಿದೆ, ವೈದ್ಯರ ವೃತ್ತಿ ಗೌರವಯುತವಾಗಿದ್ದು, ಆದರ್ಶ ವೈದ್ಯರು ರೋಗದ ಚಿಕಿತ್ಸೆಗಿಂತ ರೋಗ ತಡೆಗಟ್ಟುವಿಕೆಗೆ ಗಮನ ನೀಡುತ್ತಾರೆ. ವೈದ್ಯ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣದ ಮಾಹಿತಿಯನ್ನು ಅವಲಂಬಿಸದೇ ಪುಸ್ತಕಗಳನ್ನು ಓದಿ, ವೈದ್ಯ ಉಪನ್ಯಾಸಕರಿಂದ ಆಸ್ಪತ್ರೆಯಲ್ಲಿ ಮಾಹಿತಿ ಸಂಗ್ರಹಿಸಿ ಜ್ಞಾನ ವೃದ್ಧಿಸಿಕೊಳ್ಳಬೇಕು ಎಂದು ವೈದ್ಯ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರಲ್ಲದೆ, ವೈದ್ಯಕೀಯ ವೃತ್ತಿಯಲ್ಲಿ ಭಾರತ ರತ್ನ ಡಾ.ಬಿ.ಸಿ.ರಾಯ್ ರವರ ಹಾಗೆ ಸೇವೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಸಾರ್ಥಕ ಬದುಕು ನಮ್ಮದಾಗಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಮಾತನಾಡಿ ವೈದ್ಯರು ದೇವರಲ್ಲ. ದೇವರ ಪ್ರತಿನಿಧಿಗಳು. ಜನರ ಆರೋಗ್ಯ ಕಾಪಾಡಿ ಆರೈಕೆ ಮೂಲಕ ಜೀವ ಉಳಿಸುವ ವೈದ್ಯವೃತ್ತಿ ಪವಿತ್ರವಾದುದು ಎಂದರು.

ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿ ಎಲ್ಲ ವೃತ್ತಿಗಳಲ್ಲಿ ಶ್ರೇಷ್ಠವಾದದ್ದು ವೈದ್ಯ ವೃತ್ತಿ, ವೈದ್ಯರಾದವರಿಗೆ ಸಮರ್ಪಣೆ ತ್ಯಾಗ, ಸನ್ನಡತೆ , ಸಮಯ ಪ್ರಜ್ಞೆ ಅತ್ಯವಶ್ಯ. ವೈದ್ಯಕೀಯ ಸೇವೆಯಲ್ಲಿ ಈ ಭಾಗದ ಜನರಿಗೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಅನನ್ಯವಾದ ಶ್ರೇಷ್ಠ ಗುಣಮಟ್ಟದ ವೈದ್ಯಕೀಯ ಸೇವೆಯಿಂದ ಸಂಜೀವಿನಿಯಾಗಿದ್ದು ಈ ನಿಟ್ಟಿನಲ್ಲಿ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠರ ಕೊಡುಗೆಯೂ ಅಪಾರ ಹಾಗೂ ಶ್ಲಾಘನೀಯ ಎಂದರು.

ವೈದ್ಯ ವಿದ್ಯಾರ್ಥಿನಿಯರಾದ ಕುಮಾರಿ ಅನ್ನಪೂರ್ಣ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಕುಮಾರಿ ಅಂಬಿಕಾ ಅವಟಿ ಸ್ವಾಗತಿಸಿದರು.ಕುಮಾರಿ ಶ್ವೇತಾ ಸಜ್ಜನ ಪರಿಚಯಿಸಿದರು, ಕುಮಾರಿ ಯರ್ರಾ ಪಾವನಿ ವಂದಿಸಿದರು.ಕುಮಾರಿ ತನ್ವಿ ನುಗ್ಗಾನಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂಧರ್ಭದಲ್ಲಿ ನೂತನವಾಗಿ ಪದಗ್ರಹಣ ಮಾಡಿದ ಬಾಗಲಕೋಟೆಯ ಪ್ರತಿಷ್ಠಿತ ಬವಿವಿ ಸಂಘದ ಎಸ್.ಎನ್.ವೈದ್ಯಕೀಯ ಮಹಾವಿದ್ಯಾಲಯದ ನೂತನ ಪ್ರಾಚಾರ್ಯೆ ಡಾ. ಭುವನೇಶ್ವರಿ ಯಳಮೇಲಿಯವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರುಗಳಾದ ಡಾ.ರವಿ.ಎಸ್.ಕೋಟೆಣ್ಣವರ.ಡಾ.ಅಮರೇಶ ಬಳಗಾನೂರ.ಡಾ.ವಿಜಯಲಕ್ಷ್ಮಿ ಪಾಟೀಲ. ಡಾ.ರುದ್ರೇಶ ಕೊಪ್ಪಳ. ಡಾ.ವಿಜಯಲಕ್ಷ್ಮಿ ಪೂಜಾರ. ಡಾ.ಪ್ರದೀಪ .ಕೆ.ಎಸ್. ಉಪಸ್ಥಿತರಿದ್ದರು.

# ಕಲಿಕಾ ಕಾರ್ಯಕ್ರಮ: ಮಾದಕ ವ್ಯಸನ ತಡೆಗಟ್ಟುವಲ್ಲಿ ಔಷಧವ್ಯಾಪಾರಸ್ಥರ ಪಾತ್ರ ಬಹುಮುಖ್ಯ



**ಮಹಾಲಿಂಗಪುರ :** ಸಮಾಜದಲ್ಲಿನ ಮಾದಕ ವ್ಯಸನಗಳನ್ನು ತಡೆಗಟ್ಟುವಲ್ಲಿ ಒಔಷಧ ವ್ಯಾಪಾರಸ್ಥರ ಪಾತ್ರವು ಬಹುಮುಖ್ಯವಾಗಿದೆ ಎಂದು ಬಾಗಲಕೋಟೆ ವೃತ್ತ ಸಹಾಯಕ ಔಷಧ ನಿಯಂತ್ರಕರಾದ ಡಾ। ವಿರೇಶಬಾಬು ಎಸ್.ವ್ಹಿ. ಹೇಳಿದರು. ಪಟ್ಟಣದ ಎಪಿಎಂಸಿ ದಲಾಲವರ್ತಕರಸಭಾಭವನದಲ್ಲಿ ಒಔಷಧ ನಿಯಂತ್ರಣ ಇಲಾಖೆ ಬಾಗಲಕೋಟೆ ಹಾಗೂ ಮಹಾಲಿಂಗಪುರ ಔಷಧ ವ್ಯಾಪಾರಸ್ಥರ ಸಂಘ ಸಂಯುಕ್ತಾಶ್ರಯದಲ್ಲಿ ಬುಧವಾರ ಸಂಜೆ ಜರುಗಿದ ಅಂತರಾಷ್ಟ್ರೀಯ ಔಷಧಗಳ ದುರುಪಯೋಗ ಹಾಗೂ ಅಕ್ರಮ ಕಳ್ಳ ಸಾಗಾಣಿ ವಿರೋಧಿ ದಿನಾಚರಣೆಯ ಕಲಿಕಾ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು ತಜ್ಞ ವೈದ್ಯರ ಚೀಟಿ ಇಲ್ಲದೇ ಯಾವುದೇ ಔಷಧವನ್ನು ರೋಗಿಗಳಿಗೆ ನೀಡಬೇಡಿ. ಎಂಬಿಬಿಎಸ್ ಹಾಗೂ ಅದಕ್ಕಿಂತ ಹೆಚ್ಚಿನ ತಜ್ಞ ವೈದ್ಯರ ಶಿಫಾರಸು ಇಲ್ಲದೇ ಎಂಟಿಬಿ ಕಿಟ್ ಮಾರಾಟ ಮಾಡಬೇಡಿ. ಒಂದು ವೇಳೆ ಮಾರಾಟ ಮಾಡಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ.

ಔಷಧ ವ್ಯಾಪಾರಸ್ಥರು ಕೇವಲ ಸ್ಪರ್ಧಾತ್ಮಕ ವ್ಯಾಪಾರ ಮತ್ತು ಲಾಭದಉದ್ದೇಶದಮನೋಭಾವ ತಾಳದೇ, ವ್ಯಸನಮುಕ್ತ ಸಮಾಜ ನಿರ್ಮಾಣದ ಚಿಂತನೆ ಹಾಗೂ ಔಷಧ ನಿಯಂತ್ರಣ ಇಲಾಖೆಯ ನಿಯಮಾವಳಿಗೆ ಬದ್ದರಾಗಿ ವ್ಯಾಪಾರ ಮಾಡಿರಿ. ಯಾವುದೇ ಆಮೀಷಗಳಿಗೆ ಒಳಗಾಗಿ ಕಾನೂನು ವಿರೋಧಿ ಚಟುವಟಿಕೆಗಳಿಗೆ ಸಹಮತ ನೀಡದೆ, ಯಾವ ಒತ್ತಡ ಮತ್ತು ಆತಂಕವಿಲ್ಲದೇ ವೈದ್ಯಕೀಯ ಕಾನೂನಿನ ಪರಿಧಿಯಲ್ಲಿ ವ್ಯಾಪಾರ ಮಾಡಬೇಕು ಎಂದರು.

ಸಮಾಜದಲ್ಲಿ ವ್ಯಸನಿಗಳು ಮತ್ತು ಅಪರಾಧಗಳ ಸಂಖ್ಯೆಗಳನ್ನು ಕಡಿಮೆ ಮಾಡುವಲ್ಲಿ ಔಷಧ ವ್ಯಾಪಾರಸ್ಥರ ಪಾತ್ರವು ಮುಖ್ಯವಾದ್ದರಿಂದ ಮಾದಕ ವಸ್ತುಗಳ ದುರುಪಯೋಗವಾಗದಂತೆ ಎಚ್ಚರವಹಿಸುವದು ಅಗತ್ಯ. ವ್ಯಾಪಾರದ ಜೊತೆಗೆ ಅಪರಾಧ ಮತ್ತು ವ್ಯಸನಮುಕ್ತ ಸಮಾಜ ನಿರ್ಮಿಸಲು ಪ್ರಯತ್ನಿಸಬೇಕು. ಯಾರು ದುಷ್ಟ ವ್ಯಸನಿ ಆಗಬೇಡಿ, ವ್ಯಸನಿಕರ ಸಂಖ್ಯೆ ಕಡಿಮೆ ಮಾಡುವದು ನಿಮ್ಮ ಜವಾಬ್ದಾರಿಯಾಗಿದೆ ಎಂದು ಔಷಧ ವ್ಯಾಪಾರಸ್ಥರಿಗೆ ಸೂಕ್ತಮಾರ್ಗದರ್ಶನನೀಡಿದರು.

ಸಮುದಾಯ ಆರೋಗ್ಯ ಆಸ್ಪತ್ರೆ ಮುಖ್ಯವೈದ್ಯಾಧಿಕಾರಿ ಸಿ.ಎಂ. ವಜ್ಜರಮಟ್ಟಿ ಮಾತನಾಡಿದರು. ಬಾಗಲಕೋಟೆ ಔಷಧಿ ಪರಿವೀಕ್ಷಕರಾದ ಮಂಜುನಾಥ ಎಸ್.ಎಸ್, ಬನಹಟ್ಟಿಯ ಆರ್. ಕೆ.ಹಿರೇಮಠ, ರಬಕವಿಯ ರವಿ. ಎಸ್.ಕೊಕಟನೂರ, ಬೀಳಗಿಯ ಬಸವರಾಜ ಬಿರಾದರ, ಮುಧೋಳದ ರಾಜು ನಾಯಕ ಅತಿಥಿಗಳಾಗಿ ಭಾಗವಹಿಸಿದ್ದರು.

ಮಹಾಂತೇಶ ತಿರಕ್ನವರ, ಶ್ರೀಶೈಲ ಹಿಪ್ಪರಗಿ, ಅನೀಲ ಉಳ್ಳಾಗಡ್ಡಿ, ಶ್ರೀಪಾದ ಗುಂಡಾ, ರವಿ ಗೊಬ್ಬಾಣಿ, ರಾಜು ನಂದೆಪ್ಪನವರ, ಗುರುರಾಜ ಅಂಬಿ, ಬಸವರಾಜ ಶಿರೋಳ, ಶ್ರೀನಾಥ ಹಲಗಿಗೌಡರ, ಬಸವರಾಜ ಕೊಣ್ಣೂರಮಠ, ಸಿದ್ದು ಕೊಣ್ಣೂರ, ಪ್ರಕಾಶ ಹೊಸೂರ, ಮನೋಹರ ಜಮಖಂಡಿ, ಮಹಾಲಿಂಗ ಪಾಟೀಲ, ಕಿರಣ ಗುಂಡಾ, ಆನಂದ ಗುಂಡಾ, ಶಿವಾನಂದ ಬಡಿಗೇರ, ಪ್ರಭು ಮುನ್ನೋಳ್ಳಿ, ಶಂಕರ ಹೊಸಕೋಟಿ, ಸಂತೋಷ ತಿಪ್ಪಾ, ಅಖಿಲೇಶ ಸಬಕಾಳೆ, ಶಂಕರ ಹುಕ್ಕೇರಿ, ಸುರೇಶ ಬಾಯಪ್ಪಗೋಳ, ಹರೀಷ ಮೇಟಿ ಸೇರಿದಂತೆ ಹಲವರು ಇದ್ದರು.

# ಪ್ಲಾಸ್ಟಿಕ್ ತ್ಯಾಜ್ಯಗಳು ಮನುಕುಲಕ್ಕೆ ಮಾರಕ: ಫ್ರಾನ್ಸ್ ದೇಶದ ವಿದ್ಯಾರ್ಥಿ ಸೋರೇನ್





**ಮಹಾಲಿಂಗಪುರ :** ಪ್ಲಾಸ್ಟಿಕ್ ಬಳಕೆ ಮಾಡಿ ಬಿಸಾಡಿದ ತ್ಯಾಜ್ಯದಿಂದ ಹಾನಿಕಾರಕ ರಾಸಾಯನಿಕಗಳು ಉತ್ಪತ್ತಿಯಾಗಿ ಮನುಕುಲಕ್ಕೆ ವಿವಿಧ ಕಾಯಿಲೆಗಳು ಬರುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಅಧ್ಯಯನಗಳಿಂದ ಧೃಡ ಪಟ್ಟಿದೆ ಎಂದು ಯು.ಎ.ಎಂ (ಆಯ್. ಎಸ್ ಸಿ) ಅಂತಾರಾಷ್ಟ್ರೀಯ ಸಂಸ್ಥೆಯ ವಿದ್ಯಾರ್ಥಿ ಫ್ರಾನ್ಸ್ ದೇಶದ ಸೋರೇನ್ ಹೇಳಿದರು.

ಜತ್ತಿ ಫೌಂಡೇಷನ್, ಯ.ಎ.ಎಂ. ಕೆಎಲ್‌ಇ ಶಿಕ್ಷಣ ಸಂಸ್ಥೆ, ಕೆಜೆ ಸೋಮಯ್ಯ ಶಿಕ್ಷಣ ಸಂಸ್ಥೆ, ಸರ್ಕಾರಿ ಪ್ರೌಢಶಾಲೆ ಮತ್ತು ಪುರಸಭೆಯ ಸಹಯೋಗದಲ್ಲಿ ಬುಧವಾರ ಪ್ಲಾಸ್ಟಿಕ್ ಚೀಲಗಳ ನಿಷೇಧ ದಿನ ಮತ್ತು ಪ್ಲಾಸ್ಟಿಕ್ ಮುಕ್ತ ವಿಶ್ವ ಅಂಗವಾಗಿ ಪ್ಲಾಗೋತ್ಥಾನ ಕಾರ್ಯಕ್ರಮ ನಡೆಯಿತು.

ಜತ್ತಿ ಪೌಂಡೇಶನ ಕಾರ್ಯಕರ್ತರು, ಸ್ಕೌಟ್ಸ್ ಮತ್ತು ಗೈಡ್ಸ್, ಕೆಎಲ್‌ಇ ಸಂಸ್ಥೆಯ ಪಿಯು ಮತ್ತು ಪದವಿ ಸೇರಿ 200 ವಿದ್ಯಾರ್ಥಿಗಳೊಂದಿಗೆ ಫ್ರಾನ್ಸ್ ದೇಶದಎಂಟುಜನವಿದ್ಯಾರ್ಥಿಗಳ ಸಮೂಹವು ಹಲವು ತಂಡಗಳನ್ನು ರಚಿಸಿಕೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಶೇಖರಿಸಿ, ಸಾರ್ವಜನಿಕರಿಗೆ ಪ್ಲಾಸ್ಟಿಕ್ ಬಳಕೆಯ ನಿಷೇಧದ ಜಾಗೃತಿ ಮೂಡಿಸಿ, ನಂತರ ಕೆಎಲ್‌ಇ ಪದವಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಪ್ಲಾಸ್ಟಿಕ್ ತ್ಯಾಜ್ಯಗಳಿಂದ ಹೊರಸೂಸುವ ರಾಸಾಯನಿಕಗಳಿಂದ ವಾಯು ಮಂಡಲ ಕಲುಷಿತಗೊಂಡು ಮಾನವನ ಎಲುಬುಗಳಿಗೆ ಹಾನಿ, ಕ್ಯಾನ್ಸರ್, ಕಣ್ಣುಗಳಿಗೆ, ಚರ್ಮದ ಮೇಲೆ, ಉಸಿರಾಟಕ್ಕೆ, ತಲೆ ನೋವಿಗೆ, ದೇಹಕ್ಕೆ ಆಯಾಸ, ಬಂಜೆತನ ಹಾಗೂ ಪುರುಷತ್ವದ ಮೇಲೆ ಗಾಢ ಪ್ರಭಾವ ಬೀರುತ್ತದೆ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಪರಿಸರವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಜತ್ತಿ ಫೌಂಡೇಷನ ಧೃವ ಜತ್ತಿ ಮಾತನಾಡಿ ಪ್ಲಾಸ್ಟಿಕ್ ನಿಂದ ತಯಾರಾದ ವಸ್ತುಗಳಿಂದ ನೀರಿನ ಮೂಲಗಳು, ನದಿ, ಹಳ್ಳ,ಕೊಳ್ಳಗಳು, ಸಸ್ಯ ರಾಶಿ ಹಾಗೂ ಕೃಷಿ ಭೂಮಿಗಳು ಹದಗೆಟ್ಟು ಹೋಗುತ್ತಿವೆ. 2050 ರ ಹೊತ್ತಿಗೆ ಸಮುದ್ರದಲ್ಲಿಯ ಒಟ್ಟಾರೆ ಮೀನುಗಳಿಗಿಂತ ಪ್ಲಾಸ್ಟಿಕ್ ತ್ಯಾಜ್ಯವೇ ತುಂಬಿ ಸಮುದ್ರ ಜೀವಿಗಳಿಗೆ ಕಂಟಕವಾಗಲಿದೆ. ನಾವು ಈಗಿನಿಂದಲೇ ಸಾರ್ವಜನಿಕರಲ್ಲಿ ಪ್ಲಾಸ್ಟಿಕ್ ಮುಕ್ತಕ್ಕಾಗಿ ಜಾಗೃತಿ ಅಭಿಯಾನ ಆರಂಭಿಸಬೇಕು. ಇದರಿಂದ ಭವಿಷ್ಯದಲ್ಲಿ ನೆಮ್ಮದಿ ಸಿಗಲಿದೆ. ಇಲ್ಲದಿದ್ದರೆ ಮುಂದಿನ ಪೀಳಿಗೆಯು ಘೋರ ಪರಿಣಾಮ ಎದುರಿಸುವದು ನಿಶ್ಚಿತ ಎಂದರು.

ಈ ಸಂದರ್ಭದಲ್ಲಿ ಫ್ರಾನ್ಸ್ ದೇಶದ ವಿದ್ಯಾರ್ಥಿಗಳಾದ ಸೋರೇನ್, ಲಾರಾ, ಇಜಿಯಾ, ಲಿಯಾನ್, ಹೇಯೂಗೋ, ಲುರೆಂಜೋ, ಇನೇಜ್ ಮತ್ತು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ, ವ್ಯವಸ್ಥಾಪಕಎಸ್.ಎನ್.ಪಾಟೀಲ, ಹಿರಿಯ ಆರೋಗ್ಯ ನಿರೀಕ್ಷಕ ಎಂ.ಎಂ.ಮುಗಳಖೋಡ, ಕಿರಿಯ ಆರೋಗ್ಯ ನಿರೀಕ್ಷಕರಾದ ಸಿದ್ದು ಅಳ್ಳಿಮಟ್ಟಿ, ರಾಜು ಹೂಗಾರ, ಪದವಿ ಕಾಲೇಜಿನ ಪ್ರಾಚಾರ್ಯ ಕೆ.ಎಂ.ಅವರಾದಿ, ಉಪಪ್ರಾಚಾರ್ಯ ಬಿ.ಎನ್. ಅರಕೇರಿ, ಉಪನ್ಯಾಸಕರಾದ ಎಲ್.ಬಿ.ತುಪ್ಪದ, ಶಿವಲಿಂಗ ಸಿದ್ನಾಳ, ರವಿ ಕಲ್ಲೋಳ್ಳಿ, ಪುರಸಭೆಯ ಮಹಾಲಿಂಗಪ್ಪ ಮುಗಳಖೋಡ, ರಾಜು ಹೂಗಾರ, ಸಿದ್ದು ಅಳ್ಳಿಮಟ್ಟಿ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವಮಠ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ವಪ್ನ ಅನಿಗೋಳ, ಶಿವಲಿಂಗಪ್ಪ ಜುಟ್ನಟ್ಟಿ, ಸದಾಶಿವ ಕವಟಗಿ,ಸುರೇಶಬಾಡಗಿ,ತನುಜಾ ಬಾಡಗಿ, ಜತ್ತಿ ಫೌಂಡೇಷನ್ ಗೋಪಾಲ ಕರೆಪ್ಪನ್ನವರ, ವಿಜಯ ಬಿರಾದಾರ, ಶಶಿಕಾಂತ ಖಂಡ್ರೆ, ಸುರೇಶ ಸೇರಿದಂತೆ ಹಲವರು ಇದ್ದರು.

# ಕೇಂದ್ರದಿಂದ ಮೂರು ಅಪರಾಧ ಕರಾಳ ಕಾನೂನು ಜಾರಿ: ಎಸ್‌ಯುಸಿಐ ಖಂಡನೆ




**ವಿಜಯಪುರ :** ಸಾರ್ವಜನಿಕ ಅಭಿಪ್ರಾಯ ಮತ್ತು ನ್ಯಾಯಶಾಸ್ತ್ರಜ್ಞರ ಮತ್ತು ಇತರ ಗಣ್ಯ ವ್ಯಕ್ತಿಗಳ ಧ್ವನಿಯನ್ನು ಧಿಕ್ಕರಿಸಿ, ಕೇಂದ್ರ ಬಿಜೆಪಿ ಸರ್ಕಾರ ಮೂರು ಕರಾಳ ಅಪರಾಧ ಕಾನೂನುಗಳನ್ನು ಜಾರಿಗೆ ತಂದಿದೆ ಎಂದು ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ಬಿ. ಭಗವಾನರೆಡ್ಡಿ ಖಂಡಿಸಿದ್ದಾರೆ.

ಈ ಹಿಂದೆ ವಸಾಹತುಶಾಹಿ ಆಳ್ವಿಕೆಯಲ್ಲಿ ಜಾರಿಯಾದ ಶಾಸನಗಳ ಬದಲಿಯಾಗಿ ಈ ಕಾನೂನುಗಳು ಎಂದು ಹೇಳಲಾಗಿದ್ದರೂ, ವಾಸ್ತವವಾಗಿ ಇವು ಹೆಚ್ಚು ಕಠೋರ ಮತ್ತು ನಿರ್ದಯವಾಗಿದ್ದು ಹಾಗೂ ದೇಶವನ್ನು ಪೊಲೀಸ್ ರಾಜ್ ಆಗಿ ಪರಿವರ್ತಿಸಲು ಉದ್ದೇಶಿಸಿವೆ. ಕಳೆದ ಹತ್ತು ವರ್ಷಗಳಿಂದ ಆಚರಿಸಿಕೊಂಡು ಬಂದಿರುವ ಅಘೋಷಿತ ತುರ್ತುಪರಿಸ್ಥಿತಿ ಮತ್ತು ಫ್ಯಾಸಿಸ್ಟ್ ನಿರಂಕುಶ ಆಡಳಿತವನ್ನು ಮುಂದುವರಿಸಲು ಹಾಗೂ ದುಡಿಯುವ ಜನರ ಬದುಕನ್ನು ಮತ್ತಷ್ಟು ವಿನಾಶಕಾರಿಯಾಗಿಸಲು ಬಿಜೆಪಿ ಸರ್ಕಾರವು ನಿರ್ಧರಿಸಿದೆ ಎಂಬುದು ಸ್ಪಷ್ಟವಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕಾನೂನುಗಳನ್ನು ತಕ್ಷಣವೇ ರದ್ದುಗೊಳಿಸಬೇಕು. ಎಲ್ಲಾ ಜನತಾಂತ್ರಿಕ–ಮನಸ್ಸಿನ ಜನರು, ನ್ಯಾಯಶಾಸ್ತ್ರಜ್ಞರು ಮತ್ತು ಬುದ್ಧಿಜೀವಿಗಳು ಈ ಕಾನೂನುಗಳ ರದ್ದತಿಗೆ ಒಗ್ಗಟ್ಟಿನ ಧ್ವನಿಯನ್ನು ಎತ್ತುವಂತೆ ಅವರು ಕರೆ ನೀಡಿದ್ದಾರೆ.

# ನಗರ ಕಲಿಕಾ ಪ್ರಾಯೋಗಿಕ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಯಲಬುರ್ಗಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಡೇ ನಲ್ಮ್ ಅಭಿಯಾನ ಮತ್ತು ಪಿ.ಎಂ ಸ್ವನಿಧಿ ಯೋಜನೆ ಅಡಿಯಲ್ಲಿ ನಗರ ಕಲಿಕಾ ಮತ್ತು ಪ್ರಾಯೋಗಿಕ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕಲಿಕಾ ಮತ್ತು ಪ್ರಾಯೋಗಿಕ (ಟಿ.ಯು. ಎಲ್.ಐ.ಪಿ – ದಿ ಅರ್ಬನ್ ಲರ್ನಿಂಗ್ ಇಂಟರ್ನ್‌ಶಿಪ್ ಪ್ರೋಗ್ರಾಂ) ತರಬೇತಿ ಕಾರ್ಯಕ್ರಮವನ್ನು 2024–25ನೇ ಸಾಲಿಗೆ ಅನುಷ್ಠಾನಗೊಳಿಸಲು ಸರಕಾರದಿಂದ 03 ಗುರಿಗಳನ್ನು ನಿಗದಿ ಪಡಿಸಲಾಗಿದ್ದು, ಬೀದಿ ಬದಿ ವ್ಯಾಪಾರಿಗಳ ಕುರಿತು ಅಧ್ಯಯನ ಮಾಡುವುದು,

ಜ್ಞಾನ ಮತ್ತು ಕೌಶಲ್ಯ ವೃದ್ಧಿಸಿಕೊಳ್ಳಲು ಅವಕಾಶ ಕಲ್ಪಿಸಿ ಕೊಡುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ.

ಯಲಬುರ್ಗಾ ಪಟ್ಟಣ ಪಂಚಾಯತ ವ್ಯಾಪ್ತಿಯ ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲಾತಿಗಳೊಂದಿಗೆ ಜುಲೈ 10 ರೊಳಗಾಗಿ ಕೇಂದ್ರ ಸರ್ಕಾರದ ವೆಬ್‌ಸೈಟ್ Ministry of Housing and Urban Affairs ನಲ್ಲಿ https://internship.aicte-india.org/module_ulb/Dashboard/TulipMain/ ರ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿ ಅರ್ಜಿ ಸಲ್ಲಿಸುವಂತೆ ಯಲಬುರ್ಗಾ ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೋಲುಗಳನ್ನು ಸ್ವೀಕರಿಸುವವನು ಮಾತ್ರ ಜೀವನದಲ್ಲಿ ಗೆಲುವುಗಳನ್ನು ಸೃಷ್ಟಿಸಬಲ್ಲ



'ಸೋಲು' ಎಂಬ ಎರಡಕ್ಷರವು ಎಷ್ಟೊಂದು "ನೋವು' ಕೊಡುತ್ತದೆಯೆಂದು ಅದನ್ನು ಅನುಭವಿಸಿದವರಿಗೆ ಮಾತ್ರ ಗೊತ್ತಿರುತ್ತದೆ. ಅದರ ಆಳವನ್ನು ತಿಳಿದುಕೊಂಡವರಿಗೂ ಅದು ಗೊತ್ತಿರುತ್ತದೆಸೋತರೆಸಾವುಮಾತ್ರಪರಿಹಾರವೆ? ಖಂಡಿತ ಸಾವು ಪರಿಹಾರವಲ್ಲ, ಸೋಲೆಂಬ ನೋವಿನಿಂದ ಹೊರಬರಲು ಸಾಧ್ಯವಿದೆ. ಸೋತವರು ಅನುಭವಿಸುವ ನೋವಿದೆಯಲ್ಲ ಅದನ್ನ ಹೇಗೆ ಎಂದು ವಿಶ್ಲೇಷಿಸಲು ಸಾಧ್ಯವಿಲ್ಲ. ಹತ್ತುಜನರುಆಡಿಕೊಳ್ಳುವಪರಿಹಾಸ್ಯವಿದೆಯಲ್ಲ ಅದು ಕಠೋರವಾದದ್ದು. ಸೋತವರಿಗೆ ಅದನ್ನು ಎದುರಿಸುವ ಶಕ್ತಿ ಬೇಕು ಅಷ್ಟೆ. ಅಂತಹವರು ಎಷ್ಟೇ ಕಷ್ಟ ಬಂದರೂ ಎದುರಿಸಬಲ್ಲರು. ಡಾ। ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಒಂದು ಮಾತು ಹೇಳಿದ್ದಾರೆ. ಸೋಲುವುದು ತಪ್ಪಲ್ಲ ಅವು ಭವಿಷ್ಯದ ಹೆದ್ದಾರಿಗಳು. ಭಯ ಪಟ್ಟವನು ಇದ್ದಲ್ಲಿಯೇ ಇರುತ್ತಾನೆ" ಎಂದು. ಆದ್ದರಿಂದ ಸೋತವರು ಭಯ ಪಡಬಾರದು ಎಂಬುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮಾನವನಾಗಿ ಹುಟ್ಟಿದ ಮೇಲೆ ಜೀವನದ ಕೆಲವೊಂದು ದಾರಿಗಳಲ್ಲಿ ಸೋಲುಂಟಾಗುವುದು ಸಹಜ. ಸೋಲುಗಳನ್ನು ಧನಾತ್ಮಕವಾಗಿ ಯಾಕೆ ಸ್ವೀಕರಿಸಬಾರದು.

ಸೋಲುಗಳನ್ನು ಕೈಚಾಚಿ ಸ್ವೀಕರಿಸಿದರೆ ಮಾತ್ರ ಗೆಲುವೆಂಬ ಪದದ ಅರ್ಥ ಹಾಗೂ ಆ ಪದದ ಬೆಲೆ ತಿಳಿದುಬರುತ್ತದೆ. ಸೋತವನಿಗೆ ಅವಕಾಶಗಳಿರುವುದಿಲ್ಲ.ಅವಕಾಶಗಳನ್ನುನಾವು ಸೃಷ್ಟಿಸಬೇಕುಅಷ್ಟೆ.ಪರೀಕ್ಷೆಯಲ್ಲಿಸೋತರೆಂದರೆ ಅವರು ಅವರ ಜೀವನದಲ್ಲಿ ಸೋತರೆಂದು ಅರ್ಥವಲ್ಲ. ಅದನ್ನು ಅವರು ಸಮರ್ಪಕವಾಗಿ ಬಳಸಬೇಕು ಅಷ್ಟೆ. ಸೋತವರಿಗೆ ಕೈಹಿಡಿಯುವ ಸಂಸ್ಥೆಗಳು ಇರುತ್ತವೆ. ಪರೀಕ್ಷೆಯಲ್ಲಿ ಸೋತರೆಂದರೆ ಟ್ಯುಟೋರಿಯಲ್ ಸಂಸ್ಥೆಗಳು ಅವರ ಕತ್ತಲ ಬಾಳಿಗೆ ಬೆಳಕಾಗುತ್ತದೆ. ಅವರಿಗೆ ಮರು ಅವಕಾಶಗಳನ್ನು ಸೃಷ್ಟಿಸಿ ಕೊಡುತ್ತದೆ. ಅವರು ಆ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು.

ಸೋತವನಿಗೆ ಗೆಲ್ಲಬೇಕೆನ್ನುವ ಹಂಬಲ ಅಧಿಕವಿರುತ್ತದೆ. ಆದ್ದರಿಂದ, ಅದಕ್ಕೆ ಪೂರಕವಾಗಿರುವ ವಾತಾವರಣವನ್ನು ಸೃಷ್ಟಿಸಿಕೊಳ್ಳಬೇಕು. ಪ್ರತಿ ಬಾರಿಯೂ ಗೆಲ್ಲುವವನಿಗೆ ಆತ್ಮವಿಶ್ವಾಸ ಅಧಿಕವಿರುತ್ತದೆ. ಆದರೆ, ಪರಿಶ್ರಮ ತಕ್ಕಮಟ್ಟಿಗೆಯಷ್ಟೇ ಇರುತ್ತದೆ. ಸೋತವರಲ್ಲಿ ಆತ್ಮವಿಶ್ವಾಸ ಹಾಗೂ ಪರಿಶ್ರಮ ಇವೆರಡೂ ಅಧಿಕವಾಗಿರಬೇಕು.

ನನಗೆ ನನ್ನ ಸರ್ ಒಬ್ರು ಹೇಳುವ ಮಾತುಗಳು ನೆನಪಾಗುತ್ತದೆ. "ಎಂತಹದೇ ಕಷ್ಟಗಳಾದರೂ ಅವುಗಳನ್ನು ಧನಾತ್ಮಕವಾಗಿ ಸ್ವೀಕರಿಸಿ" ಎಂದು. ಸೋಲನ್ನು ಧನಾತ್ಮಕವಾಗಿ ಸ್ವೀಕರಿಸಿದವರಿಗೆ ಒಂದಲ್ಲ ಒಂದು ಹಾದಿಯಲ್ಲಿ ಗೆಲುವಿದ್ದೇ ಇರುತ್ತದೆ, ಆದರೆ ಪರಿಶ್ರಮ ಹಾಗೂ ಆತ್ಮವಿಶ್ವಾಸಗಳೆರಡೂ ಇರಬೇಕು. ಸೋತವರಿಗೆ ಬೇರೆ ಯಾವ ಕ್ಷೇತ್ರದಲ್ಲಾದರೂ ಆಸಕ್ತಿಯಿದ್ದರೆ ಆ ಕ್ಷೇತ್ರದಲ್ಲಿ ದುಡಿಯುವ ಮನಸ್ಸಿದ್ದರೆ ಹಾಗೆ ಮಾಡುವುದುಒಳ್ಳೆಯದು.ಆದರೆಅವರುಅವರ ಆಸಕ್ತಿಯ ಕ್ಷೇತ್ರವನ್ನರಿತು ಆರಿಸಿಕೊಳ್ಳಬೇಕು. ಆಗ ಅವರಿಗೆ ಆತ್ಮವಿಶ್ವಾಸ ಹಾಗೂ ಪರಿಶ್ರಮ ಇವೆರಡೂ ಇರುತ್ತದೆ. ಮೊದಲ ಪ್ರಯತ್ನದಲ್ಲೇ ಗೆಲ್ಲುವವನು ಬದುಕಲ್ಲಿ ಗೆಲ್ಲುತ್ತಾನೆ. ಆದರೆ ಸೋತವನುಜಗತ್ತನ್ನೇಗೆಲ್ಲುತ್ತಾನೆ.ಯಾಕೆಂದರೆ ಸೋತವನಿಗೆಸಂಕಟವಿರುತ್ತೆ,ಸಂಕಟದೊಂದಿಗೆ ಸೆಣಸಾಡುವ ಮನಸ್ಸಿಗೆ ಛಲ ಹೆಚ್ಚಿರುತ್ತೆ. ಸೋತವರಿಗೆ ಅದರ ಬಗ್ಗೆ ದುಃಖವಿದ್ದರೆ ಮಾತ್ರ ಗೆಲುವಿನ ಹಾದಿಯನ್ನು ಹುಡುಕಲು ಸಾಧ್ಯ.

ನಾನು ಇಷ್ಟೆಲ್ಲ ಹೇಳಲು ಕಾರಣವೇನೆಂದರೆ, ನಾನು ಸೋಲನ್ನು ಅನುಭವಿಸಿದ್ದೇನೆ. ಅದರ ನೋವನ್ನು ಅನುಭವಿಸಿದ್ದೇನೆ. ಕೊನೆಯಲ್ಲಿ ಮನಸ್ಸಿಗೆ ಅಲ್ಪವೇ ನೆಮ್ಮದಿ ದೊರಕುವಂತಹ ಗೆಲುವು ಲಭಿಸಿದೆ. ಗೆಲುವು ನನ್ನ ಪಾಲಾಗಿದೆಯೆಂಬ ಅಹಂಕಾರ ಪಡಬಾರದು. ಯಾಕೆಂದರೆ ಗೆಲುವು ಆಗಲಿ ಸೋಲೇ ಆಗಲಿ ಶಾಶ್ವತವಲ್ಲ. ಅದು ಇಂದು ನನ್ನದಾಗುತ್ತದೆ. ನಾಳೆ ಬೇರೆ ಯಾರದ್ದೋ ಆಗುತ್ತದೆ. ಹಾಗೆಯೇ ಪ್ರಯತ್ನ ಅನ್ನುವುದು ಜೀವನದಲ್ಲಿ ಬಹುದೊಡ್ಡ ಪಾತ್ರವಹಿಸುತ್ತದೆ.ಮನುಷ್ಯರಾಗಿಹುಟ್ಟಿದಮೇಲೆ ಜೀವನದಲ್ಲಿಏನಾದರೊಂದುಸಾಧಿಸಲೇಬೇಕು. ಸಾಧನೆಯೆಂದು ಬಂದಕೂಡಲೇ ಪ್ರಯತ್ನ ಇರಲೇಬೇಕು. ನಮ್ಮ ಜೀವನದ ಗುರಿ ತಲುಪಲು ಪ್ರಯತ್ನ ಆವಶ್ಯವಾಗಿರುತ್ತದೆ. ಕೆಲವೊಂದು ಗುರಿಯನ್ನು ತಲುಪಲು ಹಾಗೂ ಕೆಲವೊಂದು ಸಾಧನೆಗಳನ್ನು ಮಾಡಲು ಕಠಿಣವಾದ ಪ್ರಯತ್ನವನ್ನು ಪಡಬೇಕಾದೀತು. ಪ್ರಯತ್ನಪಟ್ಟವನಿಗೆ ಮಾತ್ರಅದೃಷ್ಟಲಭಿಸುತ್ತದೆ. ಹಾಗೆಂದು ಮಾತ್ರಕ್ಕೆ ಪ್ರಯತ್ನ ಪಡದವನ ಅದೃಷ್ಟ ಸ್ಥಿರವಲ್ಲ. ಕೆಲವೊಂದು ಕೆಲಸಗಳಲ್ಲಿ ಪ್ರಯತ್ನವಿಲ್ಲದೆ ಅದೃಷ್ಟದಿಂದಷ್ಟೇ ಗೆದ್ದಿದ್ದರೆ ಆ ಅದೃಷ್ಟವು ಮುಂದೆ ಸಿಗದೆಯೂ ಇರಬಹುದು. ಅದೃಷ್ಟದಲ್ಲಿ ಗೆದ್ದವನಿಗೆ ಅಹಂಭಾವನೆ ಜಾಸ್ತಿಯಿರುತ್ತದೆ.ಕಾರಣ,ಅವರಿಗೆಕೆಲಸಗಳಲ್ಲಿನ ಕಷ್ಟಹಾಗೂಆಕೆಲಸವನ್ನುಪೂರ್ಣಗೊಳಿಸಲು ಪಟ್ಟ ಪ್ರಯತ್ನ ತಿಳಿದಿರುವುಲ್ಲ. ಆದರೆ ಪ್ರಯತ್ನಪಟ್ಟವರ ಅದೃಷ್ಟಸ್ಥಿರವಾಗಿರಬಹುದು. ಬದುಕು ಬಯಕೆಗಳ ಬಂಡಿ. ಈ ಬಯಕೆಗಳ ಬಂಡಿಯನ್ನು ಏರಿ ಸಾಗುತ್ತಿರುವವರು ನಾವು. ಇಲ್ಲಿ ಏಳು– ಬೀಳು, ಸೋಲು–ಗೆಲುವು ಸರ್ವೇಸಾಮಾನ್ಯ.ಬದುಕಿನಪ್ರತೀಹಂತದಲ್ಲೂ ಗೆಲುವು ನಮ್ಮದಾಗಬೇಕು, ಸೋಲು ಜೀವನದ ಅಂತ್ಯ ಎಂದು ನಿರ್ಧರಿಸುವುದು ಎಷ್ಟರ ಮಟ್ಟಿಗೆ ಸರಿ?

ಸೋಲು ಹೇಗೆ ಅಂತಿಮವಲ್ಲವೋ ಹಾಗೆಯೇ ಗೆಲುವು ಶಾಶ್ವತವೂ ಅಲ್ಲ. "ಸೋಲೇ ಗೆಲುವಿನ ಸೋಪಾನ'. ಸೋಲು ಮತ್ತು ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಬದುಕಿನಲ್ಲಿ ಸೋತಾಗ ಮಾತ್ರ ನಾವು ಎಲ್ಲಿ ಎಡವಿದ್ದೇವೆ ಎನ್ನುವುದನ್ನು ತಿಳಿಯಲು ಸಾಧ್ಯ. ಹಾಗೆಯೇ ಯಶಸ್ಸಿನ ಶಿಖರವೇರಿದಾಗ ಅದರ ಹಿಂದಿನ ಪರಿಶ್ರಮದ ನೈಜ ಬೆಲೆಯನ್ನು ಅರಿಯಲು ಸಾಧ್ಯ. ಅಷ್ಟು ಮಾತ್ರವಲ್ಲದೆ ಶಿಖರ ಏರಿದ ಬಳಿಕ ಇಳಿಯಲೇಬೇಕು ಎಂಬುದು ಕೂಡ ಅಷ್ಟೇ ವಾಸ್ತವ.

**"ನನ್ನ ಸಣ್ಣ ಕವನ "**

ಕುಗ್ಗದಿರು ಮನವೇ ನೀನು, ಕುಗ್ಗುವುದನ್ನು ಕಾಯೋವರ ಮುಂದೆ!!! ಸೋಲದಿರು ಮನವೇ ನಿನ್ನ ಸೋಲಿಗಾಗಿ ಆಸೆ ಪಡುವವರ ಮುಂದೆ!!! ವೀರನಂತೆ ಗೆಲ್ಲು ಮನವೇ ಎದೆಯಾಳಿ ಎದೆಯಲ್ಲಿ ನಡುಕ ಹುಟ್ಟಿಸುವಂತೆ!!!

"ಗೆಲ್ಲಬೇಕುಆಗೆಲುವಿಗೆನಿನ್ನಹೆಸರೇಇಡಬೇಕು"

ಅದೇ ರೀತಿ ಜ್ವರಬರುವುದುರೋಗದಲಕ್ಷಣವೇ ಹೊರತು ಜ್ವರ ಬಂತೆಂದಾಕ್ಷಣ ಸಾವು ಖಚಿತ ಎಂದಲ್ಲ. ಹಾಗೆಯೇ ಸೋಲು ಅಂತಿಮ ಖಂಡಿತ ಅಲ್ಲ, ಅದು ಗೆಲುವಿನ ಪ್ರಾರಂಭ. ಆಶಾವಾದಿಗಳು ಯಾವಾಗಲೂ ಸೋಲನ್ನು ಸವಾಲಾಗಿ ಸ್ವೀಕರಿಸುತ್ತಾರೆ.

ನೆಲ್ಸನ್ ಮಂಡೇಲಾರಂತಹ ಆಶಾ ವಾದಿಗಳು ನಮಗೆ ಸ್ಫೂರ್ತಿಯ ಸೆಲೆ. 27 ವರ್ಷಗಳ ಜೈಲು ಶಿಕ್ಷೆಯನ್ನು ಅನುಭವಿಸಿದ ಅವರು ಹೆದರಲಿಲ್ಲ.ಬದಲಿಗೆ1992ರಲ್ಲಿದಕ್ಷಿಣಆಫ್ರಿಕಾದ ಅಧ್ಯಕ್ಷರಾದರು.

ಸೋಲೇ ಅಂತಿಮ ಎನ್ನುವುದಾದರೆ ಸೋಲೇ ಗೆಲುವಿನ ಸೋಪಾನ ಎನ್ನುವ ವಾಕ್ಯ ತನ್ನ ಅರ್ಥವನ್ನು ಕಳೆದು ಕೊಳ್ಳುತ್ತದೆ. ಏಕೆಂದರೆ ಸೋಲನ್ನು ಗೆಲು ವನ್ನಾಗಿ ಬದಲಾಯಿಸಲು ಪ್ರಯತ್ನ ಅನಿವಾರ್ಯ. ``success comes before work only in dictionary not in life' –ಎನ್ನುವುದನ್ನು ನಾವು ತಿಳಿದುಕೊಂಡಿರಬೇಕು.

ಸೋತು ಗೆದ್ದ ವ್ಯಕ್ತಿಗಳೆಲ್ಲರೂ ಪ್ರತಿಯೊಂದು ಸೋಲಿನಲ್ಲಿಯೂ ಹೊಸ ಹೊಸ ಅವಕಾಶಗಳನ್ನು ಕಂಡುಕೊಂಡಲಿವರು. "ಆಗುವುದೆಲ್ಲ ಒಳ್ಳೆಯದಕ್ಕೆ' ಎನ್ನುವುದನ್ನು ಸದಾ ಸ್ಮರಿಸುತ್ತಿರಬೇಕು. ಎ.ಪಿ.ಜೆ. ಅಬ್ದುಲ್ ಕಲಾಂ ಪೈಲಟ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗದೇ ಇದ್ದಿದ್ದರೆ ನಮ್ಮ ದೇಶಕ್ಕೆ ಪ್ರಸಿದ್ಧ ವಿಜ್ಞಾನಿಯೊಬ್ಬರು ದೊರಕುತ್ತಿರಲಿಲ್ಲ. ಹೆಸರಾಂತ ಕವಿ ಡಿ.ವಿ. ಗುಂಡಪ್ಪನವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಪಾಸಾಗಲಿಲ್ಲ. ಆದರೂ ಅವರು ಸೋಲೊಪ್ಪಿಕೊಳ್ಳದೆ "ಮಂಕುತಿಮ್ಮನ ಕಗ್ಗ' ಎನ್ನುವ ಕೃತಿ ಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿದರು. ಪ್ರಸಿದ್ಧ ಸಿತಾರ್ ವಾದಕ ರವಿಶಂಕರ್ ನಾಟ್ಯ ಕ್ಷೇತ್ರದಲ್ಲಿ ಸೋಲನ್ನು ಅನುಭವಿಸಿ ಸಿತಾರ್ ಕಲಿತರು. ಈಗ "ಸಿತಾರ್ ಎಂದರೆ ರವಿಶಂಕರ್, ರವಿಶಂಕರ್ ಎಂದರೆ ಸಿತಾರ್' ಎನ್ನುವಷ್ಟರಮಟ್ಟಿಗೆಅವರುಬೆಳೆದುನಿಂತಿದ್ದಾರೆ. ಅಪ್ಪನಿಂದ ಅನಿಷ್ಟ ಎಂದು ಕರೆಸಿಕೊಂಡರೂ 2009ರಲ್ಲಿ ಮಿಸ್ ಇಂಡಿಯಾ ಆಗಿ ಆಯ್ಕೆಯಾದ ಪೂಜಾ ಚೋಪ್ರಾ, ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡರು ನಾಟ್ಯರಾಣಿ ಎಂದು ಗುರುತಿಸಿಕೊಂಡಿರುವ ಸುಧಾ ಚಂದ್ರನ್ ಇವರಂತೆಯೇ ಬದುಕಿನಲ್ಲಿ ಯಶಸ್ವಿ ವ್ಯಕ್ತಿಗಳಾದಂತಹ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸೋಲನ್ನು ಅನುಭವಿಸಿದವರೇ. **'ಲಾಹೋರಿ ಸೆಡರಕರನೌಕಾ ಪರನಹೀ ಹೋತಿ, ಕೋಶಿಶ ಕರನೇ ವಾಲೋ ಕಿ ಕಭಿ ಹಾರ ನಹೀಂ ಹೋತಿ'** ಎನ್ನುವ ಸಾಲುಗಳು ಪ್ರಯತ್ನದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಕಾಲು ಒದ್ದೆ ಮಾಡದೆ ಸಮುದ್ರವನ್ನು ದಾಟಬಹುದು ಆದರೆ ಕಣ್ಣು ಒದ್ದೆ ಮಾಡದೆ ಜೀವನವೆಂಬ ಸಮುದ್ರವನ್ನು ದಾಟಲು ಸಾಧ್ಯವಿಲ್ಲ. ಜೀವನದಲ್ಲಿ ಕಷ್ಟಗಳಿರುವುದು ಸರ್ವೇಸಾಮಾನ್ಯ ಪ್ರತಿಯೊಬ್ಬ ಯಶಸ್ವೀ ವ್ಯಕ್ತಿಯೂ ಕೂಡ ಸಮಾಜ ಅವರ ಮೇಲೆ ಎಸೆದ ಕಲ್ಲುಗಳಿಂದಲೇ ಬದುಕಿನ ತಳಪಾಯ ವನ್ನು ಕಟ್ಟಿಕೊಂಡವರು. ಅದರ ಮೇಲೆ ಭವ್ಯವಾದ ಕಟ್ಟಡ ನಿರ್ಮಿಸಿಕೊಂಡವರು. ತಮಗೆ ಎದುರಾದ ಎಲ್ಲ ಋಣಾತ್ಮಕ ಸನ್ನಿವೇಶಗಳನ್ನು ಧನಾತ್ಮಕವಾಗಿ ಬದ ಲಾಯಿಸಿಕೊಂಡವರು. ಆದ್ದರಿಂದ ಸೋಲಿಗೆ ಹೆದರದೆ ಬದುಕಿನ ಭವ್ಯವಾದ ಕಟ್ಟಡವನ್ನು ಸೋಲು–ಗೆಲುವು ಎನ್ನುವ ಇಟ್ಟಿಗೆಗಳಿಂದ ಸುಂದರವಾಗಿ ಕಟ್ಟಿ ಯಶಸ್ವಿ ವ್ಯಕ್ತಿಗಳು ನಾವಾಗೋಣ.

ನೀವೇ ಹೇಳಿ ಸುಡುವ ಸೂರ್ಯನಿಗೆ ಏನು ಗೊತ್ತು? ಜೀವನದಲ್ಲಿ ಸೋಲುಗಳನ್ನೇ ಸೋಲಿಸಿ ಗೆದ್ದ ವ್ಯಕ್ತಿಗಳ ಹೃದಯದಲ್ಲಿ ಸುಡುವ ಆ ತಾಪಮಾನ.

ಜೀವನದಲ್ಲಿನಾವುಒಂದಲ್ಲಾಒಂದುಸ್ಪರ್ಧೆಯನ್ನು ಎದುರಿಸುತ್ತಲೇ ಇರುತ್ತೇವೆ. ಕೆಲವೊಂದು ತುಂಬಾ ಮಹತ್ವದ್ದಾಗಿರುವ ಸ್ಪರ್ಧೆಗಳು ನಮ್ಮ ಗಮನಕ್ಕೆ ಬರುತ್ತವೆ. ಕೆಲವೊಂದು ಸ್ಪರ್ಧೆಗಳಲ್ಲಿ ನಾವು ಸ್ಪರ್ಧಿಸಿದ್ದರೂ ನಮ್ಮ ಗಮನಕ್ಕೆ ಬರುವುದಿಲ್ಲ. ಮಹತ್ವಪಡೆದಂತಹ ಸ್ಪರ್ಧೆಗಳಲ್ಲಿ ನಾವು ಗೆದ್ದರೆ ತುಂಬಾ ಸಂತೋಷ ಪಡುತ್ತೇವೆ. ಜಗತ್ತನ್ನೇ ಗೆದ್ದೆವು ಎನ್ನುವ ಕುಶಿಯಲ್ಲಿ ಮುಳುಗಿಬಿಡುತ್ತೇವೆ. ನಮ್ಮ ಎಲ್ಲಾ ಸ್ನೇಹಿತರು ಬಂದು ಬಾಂದವರೊಂದಿಗೆ ಆ ಕುಶಿಯನ್ನು ಹಂಚಿಕೊಂಡು ನಾವೂ ಸಂತೋಶ ಪಡುತ್ತೇವೆ. ಅದೇ ಸೋಲಾದರೆ?! ನಮ್ಮವರ ಎದುರು ಅವಮಾನವಾಯಿತಲ್ಲಾ ಎಂದು ಕೊರಗುತ್ತೇವೆ. ದುಕ್ಕದಲ್ಲಿ ಮುಳುಗಿಬಿಡುತ್ತೇವೆ. ಜೀವನದಲ್ಲಿ ಏನೂ ಇಲ್ಲ ಎಂಬ ಬಾವನೆ ತಳೆಯುತ್ತೇವೆ. ಕೆಲವರು ಬದುಕನ್ನೇ ಕೊನೆಗಾಣಿಸುತ್ತಾರೆ.

" ಸೋಲಿನ ಅರ್ಥ ಏನು ಎಂಬುದನ್ನು ಅರಿಯಬೇಕ "

ಇದುಸ್ಪರ್ಧಾಜಗತ್ತು.ಪ್ರತಿವಿಷಯದಲ್ಲೂನಾವು ಸ್ಪರ್ಧೆ ಎದುರಿಸುತ್ತೇವೆ. ಆದರೆ ಸ್ಪರ್ಧೆಯಲ್ಲಿ ಸೋತಾಗ ಜಿಗುಪ್ಸೆ ಹೊಂದುವುದು ಸರಿಯೇ? ಅದೇ ಕೊನೆಯೇ? ಇಲ್ಲ. ಆದರೂ ನಾವು ಮಾನಸಿಕವಾಗಿ ಕೊರಗುತ್ತೇವೆ. ಸೋಲಿನ ಅರ್ತ ಏನು ಎಂಬುದನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕಾಗಿದೆ.

**"ಸೋಲು ಎಂಬುದು ಸಾಮರ್ತ್ಯದ ಕೊರತೆ"**

ಸೋಲುಎಂಬುದುಸಾಮರ್ತ್ಯದಕೊರತೆಅಲ್ಲವೇ. ಒಂದುನಿಗದಿತಸ್ಪರ್ಧೆಯಲ್ಲಿನಾವುಸೋತಿದ್ದೇವೆ ಅಂದರೆ ಅದರಲ್ಲಿ ನಮಗೆ ಸಾಮರ್ತ್ಯದ ಕೊರತೆ ಇದೆ ಎಂದು ಅರ್ತವಲ್ಲವೇ. ಆ ಸಾಮರ್ತ್ಯವನ್ನು ಗಳಿಸಿದಾಗ ನಾವೂ ಗೆಲ್ಲಬಹುದು ಅಲ್ಲವೇ?! ಸೋಲು ಎಂಬುದನ್ನು ನಾವೇಕೆ ಬೇರೆ ರೀತಿಯಲ್ಲಿಅರ್ತೈಸಿಕೊಳ್ಳಬಾರದು? ನಾನಿಂದು ಸೋತಿರುವೆ ಎಂದರೆ ಆ ಸ್ಪರ್ದೆ ಯಲ್ಲಿನ ಸಾಮರ್ತ್ಯ ನನಗೆ ಇನ್ನೂ ಕರಗತವಾಗಬೇಕಿದೆ ಎಂದು ತಿಳಿದರಾಯಿತು. ಆಗ ನಮಗೆ ಸೋಲು ಎಂಬ ಬಾವನೆ ಬರುವುದಿಲ್ಲ.

"ಗೆಲುವು ಆ ಸನ್ನಿವೇಶದ್ದು ಮಾತ್ರ"

ಸೋಲುಅನುಬವಿಸಿದಶ್ಟೂನಾವುಗಳಿಸಬೇಕಾದ ಸಾಮರ್ತ್ಯದ ಅರಿವು ನಮಗಾಗುತ್ತದೆ. ಆಗ ನಮಗರಿವು ಇಲ್ಲದ ಹಾಗೇ ನಾವು ಗೆಲ್ಲುತ್ತಾ ಹೋಗುತ್ತೇವೆ. ಅದೇ ನಾವು ಗೆದ್ದಿದ್ದೇವೆ ಅಂದರೆ ನಮಗೆಲ್ಲಾ ಸಾಮರ್ತ್ಯಗಳು ಕರಗತವಾಗಿವೆ ಎಂದು ಅರ್ತವಲ್ಲ. ಆ ಹಂತದಲ್ಲಿ, ಆ ಸನ್ನಿವೇಶದಲ್ಲಿ ಅಶ್ಟೇ ನಮಗೆ ಗೆಲುವಾಗಿರುತ್ತದೆ. ಆದರೆನಮಗಿಂತಲೂಹೆಚ್ಚಿನಸಾಮರ್ತ್ಯದವರು ಬಂದಾಗ ನಾವು ಕಂಡಿತ ಸೋಲುತ್ತೇವೆ.

ಹಾಗಾಗಿ ಸೋಲನ್ನು ನಾವು ಕೊನೆ ಎಂದು ಪರಿಗಣಿಸದೇ ಅದೊಂದು ಕಲಿಕೆಯ ಮೆಟ್ಟಿಲು ಎಂದು ನಾವೇಕೆ ಅಂದುಕೊಳ್ಳಬಾರದು? ಸೋಲನ್ನು ಮೆಟ್ಟಿ ನಿಲ್ಲುವ ಸಾಮರ್ತ್ಯವನ್ನು ಏಕೆ ಬೆಳೆಸಿಕೊಳ್ಳಬಾರದು, ಅಲ್ಲವೇ? ಆಗ ಸೋಲೇ ಗೆಲುವಿನ ಮೆಟ್ಟಿಲಾಗುವುದು ಕಂಡಿತ. ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೇ, ಸೋತವನಿಗೆ ಗೆಲ್ಲಲೇಬೇಕೆಂಬ ಛಲವಿರುತ್ತದೆ. ಜೀವನ ಸೋಲು–ಗೆಲುವಿನ ಆಟ. ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೇ, ಸೋತವನಿಗೆ ಗೆಲ್ಲಲೇಬೇಕೆಂಬ ಛಲವಿರುತ್ತದೆ. ಜೀವನದಲ್ಲಿ ಪ್ರತಿನಿತ್ಯವು ಹೊಸ ಯೋಜನೆಗಳನ್ನು ಅಳವಡಿಸಿಕೊಳ್ಳುವುದರಿಂದ ಭವಿಷ್ಯ ಉಜ್ವಲವಾಗುತ್ತದೆ.

ಸೋಲು ಶಾಶ್ವತವಲ್ಲ, ಗೆಲುವಿನ ದಾರಿಯ ಆಯ್ದುಕೊಳ್ಳುವ ಸ್ವಾತಂತ್ರ್ಯ ಕೂಡ ನಿಮ್ಮದೇ, ಆತ್ಮವಿಶ್ವಾಸ ಹೆಚ್ಚಿಸಲು ಸಲಹೆಗಳು ಇಲ್ಲಿವೆ ಜೀವನದಲ್ಲಿಸೋಲುಗೆಲುವುಎಲ್ಲವೂಸಾಮಾನ್ಯ, ಸೋಲೇ ಗೆಲುವಿನ ಮೆಟ್ಟಿಲು ಎನ್ನುತ್ತಾರೆ, ಆದರೆ ಕೆಲವೊಬ್ಬರ ಜೀವನದಲ್ಲಿ ಕೆಲವೊಮ್ಮೆ ಕೇವಲ ಸೋಲನ್ನು ಮಾತ್ರವೇ ಕಾಣುತ್ತಿರುತ್ತಾರೆ. ಆಗ ಸೋತೆ ಎಂದು ಕೊರಗುವುದು, ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಬದಲು, ಗೆಲುವು ನಿಮ್ಮದಾಗಿಸಿಕೊಳ್ಳುವುದು ಹೇಗೆ, ನೀವು ಎಡವಿದ್ದೆಲ್ಲಿ ಎಂಬುದರ ಬಗ್ಗೆ ಆಲೋಚಿಸಬೇಕು. ಆತ್ಮವಿಶ್ವಾಸ, ಛಲ ನಿಮ್ಮಲ್ಲಿದ್ದರೆಅಸಾಧ್ಯವಾದುದ್ದನ್ನುಕೂಡಸಾಧಿಸಿ ತೋರಿಸಬಹುದು. ಜರ್ನಲ್ ಆಫ್ ಮೆಂಟಲ್ ಹೆಲ್ತ್ ಅಂಡ್ ಸೈಕಾಲಜಿ ಪ್ರಕಾರ, ಆತ್ಮ ವಿಶ್ವಾಸವು ನಿಮ್ಮ ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಯಶಸ್ಸಿನ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ.

ನಿಮ್ಮನ್ನು ಇತರರೊಂದಿಗೆ ಹೋಲಿಸುವುದನ್ನು ನಿಲ್ಲಿಸಿ ಬೇರೆಯವರ ಸೌಂದರ್ಯ, ಬಣ್ಣ, ಮೈಕಟ್ಟು, ಆಸ್ತಿ ಎಲ್ಲದಕ್ಕೂ ಹೋಲಿಕೆ ಮಾಡಲು ಹೋಗಿ, ತಮ್ಮ ಬಳಿ ಇಲ್ಲವಲ್ಲ ಎಂದು ಕೊರಗುತ್ತಾರೆ. ಆದರೆ ಹೋಲಿಕೆ ಕೊನೆಯದಾಗಿ ಅಸೂಯೆಯಾಗಿ ಬದಲಾಗುತ್ತದೆ.

ನಿಮ್ಮನ್ನುನಿರಾಸೆಗೊಳಿಸುವಂತಹಸ್ನೇಹಿತರನ್ನು ಬಿಟ್ಟುಬಿಡಿ ನಿಮ್ಮನ್ನು ನಿರಾಸೆಗೊಳಿಸುವಂತಹ ಸ್ನೇಹಿತರನ್ನು ಬಿಡಿ. ಸಕಾರಾತ್ಮಕ ಚಿಂತನೆಯ ಜನರ ಸಹವಾಸವನ್ನು ಯಾವಾಗಲೂ ಒಪ್ಪಿಕೊಳ್ಳಬೇಕು. ನೀವು ಸಮಯ ಕಳೆಯುವ ಜನರು ನಿಮ್ಮ ಆಲೋಚನೆಗಳು ಮತ್ತು ದೃಷ್ಟಿಕೋನವನ್ನು ಪ್ರಭಾವಿಸಬಹುದು.

ನಿಮ್ಮ ಬಗ್ಗೆ ನಿಮಗೆ ಕಾಳಜಿ ಇರಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುವ ಮೊದಲು, ನಿಮ್ಮ ಬಗ್ಗೆ ನೀವು ಕಾಳಜಿವಹಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.ಪೌಷ್ಠಿಕಾಂಶಯುಕ್ತಆಹಾರ, ಆರೋಗ್ಯಕರ ಜೀವನಶೈಲಿ ನಿಮ್ಮದಾಗಬೇಕು, ಜತೆಗೆ ಸ್ವಲ್ಪ ವ್ಯಾಯಾಮ ಕೂಡ ದಿನದ ಒಂದು ಭಾಗವಾಗಿರಬೇಕು.

ತಪ್ಪನ್ನು ತಿದ್ದಿಕೊಳ್ಳಲು ಪ್ರಯತ್ನಿಸಿ ನೀವು ತಪ್ಪು ಮಾಡಿದಾಗ ಅದು ನಿಮ್ಮ ಅರಿವಿಗೆ ಬಂದಾಗ ಮತ್ತೆ ತಪ್ಪಾಗದಂತೆ ಎಚ್ಚರವಹಿಸಿ

ಸಕಾರಾತ್ಮಕ ಮಾತು ನೀವಾಡುವ ಮಾತಿಗೆ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಕುಗ್ಗಿಸಲು ಎರಡೂಶಕ್ತಿಯೂಇದೆ,ಎಂದೂಬೇರೆಯವರಿಗೆ ನೋವಾಗುವಂತೆ ಮಾತನಾಡಬೇಡಿ. ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲು ಸಕಾರಾತ್ಮಕ ಚರ್ಚೆ ಹಾಗೂ ಸಂಭಾಷಣೆ ಇರಲಿ, ಅದರೊಂದಿಗೆ ಮುನ್ನಡೆಯಿರಿ.

● ಶಿವಾನಂದ ಜಂಬಗಿ
ಅಥಣಿ

# ದಣಿವರಿಯದ ಕಾಯಕಯೋಗಿ ಡಾ. ಎಸ್. ಬಿ. ದಂಡಿನ: ಗುರುಮಹಾಂತ ಶ್ರೀಗಳು

**ಇಲಕಲ್ಲ :** ಡಾ. ಎಸ್.ಬಿ.ದಂಡಿನ ಅವರು ತೋಟಗಾರಿಕೆ, ರೇಷ್ಮೆ, ಕೃಷಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಅವಿಸ್ಮರಣೀಯ ಮತ್ತು ಅದ್ಭುತ ದಾಖಲೆಯಾಗಿದೆ. ನೂರಾರು ಸಂಕಷ್ಟಗಳನ್ನು ಎದುರಿಸಿ ಕಟ್ಟಿ ಬೆಳೆಸಿದ ಈ ಭವ್ಯ ವಿಶ್ವವಿದ್ಯಾಲಯ ಇಂದು ನಮಗೆ ಸಾಕ್ಷಿಯಾಗಿದೆ ಎಂದು ಚಿತ್ತರಗಿ-ಇಳಕಲ್ಲ ಸಂಸ್ಥಾನಮಠದ ಶ್ರೀ. ಮ.ನಿ.ಪ್ರ. ಗುರುಮಹಾಂತ ಸ್ವಾಮಿಗಳು ವ್ಯಕ್ತ ಪಡಿಸಿದರು.



ಇತ್ತೀಚಿಗೆ ದಿ.29.06.2024 ಶನಿವಾರದಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯಲ್ಲಿ ಡಾ. ಎಸ್. ಬಿ. ದಂಡಿನ ಶಿಕ್ಷಣ ಮತ್ತು ಸಂಶೋಧನಾಪ್ರತಿಷ್ಠಾನಸಂಸ್ಥೆಯ ಉದ್ಘಾಟನಾ ಸಮಾರಂಭದಲ್ಲಿ ದಿವ್ಯ ಸಾನಿದ್ಯ ವಹಿಸಿದ ಶ್ರೀಗಳು ಕೃಷಿ ಕುಟುಂಬದಿಂದ ಬಂದ ಡಾ. ಎಸ್. ಬಿ. ದಂಡಿನ ಕೇವಲ ತಮ್ಮ ಸತತ ಪರಿಶ್ರಮದಿಂದ ಎತ್ತರಕ್ಕೆ ಬೆಳೆದು ಸಾಕಷ್ಟು ಅಭಿಮಾನಿಗಳು ಮತ್ತು ಸ್ನೇಹಿತರನ್ನು ಗಳಿಸಿದ್ದಾರೆ ಎಂದು ಅಭಿಪ್ರಾಯ ಪಟ್ಟರು.

ಕರ್ನಾಟಕ ಸರಕಾರದ ಮಾಜಿ ಮಂತ್ರಿ ಎ.ಬಿ.ಪಾಟೀಲ ಮತ್ತು ಬಸವೇಶ್ವರ ವಿದ್ಯಾವರ್ಧಕ ಸಂಘ ದ ಅಧ್ಯಕ್ಷ ವೀರಣ್ಣ ಚರಂತಿಮಠ ಅವರು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟದ ಪ್ರಥಮ ಮತ್ತು ಸಂಸ್ಥಾಪಕ ಕುಲಪತಿ ಡಾ. ಎಸ್.ಬಿ.ದಂಡಿನ ಅವರ ಕಾರ್ಯವನ್ನು ಮುಕ್ತ ಕಂಠದಿಂದ ಮತ್ತು ಅಭಿಮಾನದಿಂದ ಶ್ಲ್ಯಾಘಿಸಿದರು. ಅವರು ಸಂಸ್ಥೆಗಳನ್ನು ಬೆಳೆಸುವ ಪರಿ ಮತ್ತು ರೈತರು ಹಾಗೂ ವಿದ್ಯಾರ್ಥಿಗಳ ಬಗ್ಗೆ ವಹಿಸುತ್ತಿದ ಕಾಳಜಿಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಸುಮಾರು 400ಕ್ಕೂ ಅಧಿಕ ಅಭಿಮಾನಿಗಳು, ಸ್ನೇಹಿತರು, ಹಿತೈಷಿಗಳು, ಅಧಿಕಾರಿಗಳು ಮತ್ತು ರೈತರು ಪಾಲ್ಗೊಂಡು ಅವರನ್ನು ಹತ್ತಾರು ಫಲಗಳಿಂದ ಅವರಿಗೆ ತುಲಾಭಾರ ಮಾಡಿ ಗೌರವಿಸಿದರು. ರೇಷ್ಮೆ ಇಲಾಖೆಯ ಸ್ನೇಹಿತರು ಮತ್ತು ಅಭಿಮಾನಿಗಳು ಅವರನ್ನು ಸತ್ಕರಿಸಿ 'ಭಾರತದರೇಷ್ಮೆಮನುಷ್ಯ' ಎಂದು ಅವರ ಸಾಧನೆಯನ್ನು ಹೆಮ್ಮೆಯಿಂದ ವ್ಯಕ್ತ ಪಡಿಸಿದರು. ತೋಟಗಾರಿಕೆ/ರೇಷ್ಮೆ/ಕೃಷಿ/ಸಾಮಾಜಿಕ ಮತ್ತು ಅನ್ವಯಿಕ ವಿಜ್ಞಾನಗಳ ವಿಭಾಗಗಳಲ್ಲಿ ಶಿಕ್ಷಣ ಮತ್ತು ಸಂಶೋಧನೆಯ ಪ್ರಸರಣ, ವೈಜ್ಞಾನಿಕ-ತಾಂತ್ರಿಕ ವಿಷಯಗಳ ಚರ್ಚೆ, ಜ್ಞಾನ ಪ್ರಸಾರ, ವಿಚಾರ ಸಂಕಿರಣಗಳು ಮುಂತಾದ ಧ್ಯೇಯಗಳನ್ನೊಳಗೊಂಡು ಡಾ. ಎಸ್. ಬಿ. ದಂಡಿನ ಅವರ ರೈತಪರ ಸಮಾಜಮುಖಿ ಮತ್ತು ವೈಜ್ಞಾನಿಕ ಕಾರ್ಯವನ್ನು ವಿಸ್ತರಿಸಲು "ಡಾ. ಎಸ್. ಬಿ. ದಂಡಿನ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನ ಸಂಸ್ಥೆ"ಯನ್ನು ಉದ್ಘಾಟಿಸಲಾಯಿತು. ಅನೇಕ ನಿವೃತ್ತಮತ್ತುಈಗಿನಕುಲಪತಿಗಳಾದ ಡಾ.ಶೀಲವಂತರ, ಡಾ.ಕೆ.ಎನ್. ಕಟ್ಟಿಮನಿ, ಡಾ. ಹೊಸಮನಿ ಡಾ. ಆರ್. ಆರ್. ಹಂಚಿನಾಳ, ಡಾ.ಪಿ. ಎಲ್. ಪಾಟೀಲ, ಡಾ. ಅಶೋಕ ಆಲೂರ ಹಾಗೂ ಡಾ. ತಾರಾನಾಥ ಪಾಲ್ಗೊಂಡು ಡಾ. ದಂಡಿನ ಅವರ ಸಾಧನೆಯ ಗರಿಯನ್ನು ಹೇಗೆ ಮುನ್ನಡೆಸಿಕೊಂಡು ಹೋಗಬೇಕೆಂಬುದರ ಬಗ್ಗೆ ಮಾತನಾಡಿದರು. ಕಾರ್ಯಕ್ರಮ ಅಧ್ಯಕ್ಷೀಯ ಸಮಾರೋಪ ಭಾಷಣದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿ ಡಾ. ವಿಷ್ಣುವರ್ದನ ಅವರು ಡಾ. ಎಸ್. ಬಿ. ದಂಡಿನ ಶಿಕ್ಷಣ ಮತ್ತು ಸಂಶೋಧನಾ ಪ್ರತಿಷ್ಠಾನವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲಾಗುವುದೆಂದು ಹೇಳಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಡಾ. ಟಿ.ಬಿ. ಅಲ್ಲೊಳ್ಳಿ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಶೇಷಾಧಿಕಾರಿ ಡಾ. ಆನಂದ ಮಾಸ್ತಿಹೊಳಿ ಪ್ರತಿಷ್ಠಾನದ ಬಗ್ಗೆ ವಿವರಿಸಿ ವಂದಿಸಿದರು. ಶ್ರೀ ಮಲ್ಲಿಗವಾಡ ನಿರೂಪಿಸಿದರು.

# ಧರ್ಮಸ್ಥಳ ಸಿರಿ ಮಿಲೆಟ್ ಹೌಸ್‌ನ ಮಳಿಗೆ ಉದ್ಘಾಟನೆ



**ವಿಜಯಪುರ :** ಇಲ್ಲಿನ ಐತಿಹಾಸಿಕ ಗೋಲಗುಮ್ಮಟ ಎದುರು ವಿಜಯಾಂಬ ಸಿರಿ ಮಿಲೆಟ್ ಹೌಸ್ ನ ಮಳಿಗೆಯನ್ನು ನಿವೃತ್ತ ಪೊಲೀಸ್ ಅಧಿಕಾರಿ ಲಕ್ಷ್ಮಣ ಎಸ್. ಇಂಚೂರ್ ಇತ್ತೀಚೆಗೆ ಉದ್ಘಾಟಿಸಿದರು. ಅವರು ಸಂಪ್ರದಾಯ ಆಹಾರ ಬಳಸಿದರೆ, ಸದೃಢ ಅರೋಗ್ಯ, ಆಯುಸ್ಸು ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಸಿರಿ ಮಿಲೆಟ್ ಯೋಜನಾಧಿಕಾರಿ ಮಹಾಂತೇಶ ಎಂ. ರವರು ಮಾತನಾಡಿ, ಪೂಜ್ಯ ಮಾತೋಶ್ರೀ ಅಮ್ಮನವರ ಆಶಯ ಪೌಷ್ಠಿಕಾಂಶ ಭರಿತ ಸಿರಿಧಾನ್ಯಗಳನ್ನು ರೈತರಲ್ಲಿ ಬೆಳೆಸುವಲ್ಲಿ ಪ್ರೋತ್ಸಾಹ ನೀಡುವುದು. ರೈತರಿಗೆ ಯೋಗ್ಯ ಬೆಲೆ ಒದಗಿಸುವುದು ಸಮಾಜಕ್ಕೆ ಪೌಷ್ಠಿಕಾಂಶಯುಕ್ತ ಆಹಾರ ಒದಗಿಸುವ ಮೂಲಕ ಆರೋಗ್ಯ ಭದ್ರತೆಯನ್ನು ಒದಗಿಸುವುದಾಗಿದೆ ಎಂದರು. ಇದರೊಂದಿಗೆ ಸಿರಿಧಾನ್ಯಗಳನ್ನು ಆಹಾರವಾಗಿ ಬಳಕೆ ಮಾಡುವ ಬಗ್ಗೆ ಮಾಹಿತಿ ನೀಡಿದರು. ವಿಜಯಪುರ ಜಿಲ್ಲಾ ಸಿರಿಧಾನ್ಯ ವಿತರಕರಾದ ನಾಗರಾಜ್ ಅಣೆಪ್ಪನವರ ಅವರು , ಸಿರಿಧಾನ್ಯ ಬಳಕೆಯಿಂದ ಆರೋಗ್ಯ ಕಾಪಾಡಿಕೊಳ್ಳಿರಿ. ತಾಯಂದಿರು ಇದನ್ನು ಹೆಚ್ಚು ಬಳಕೆ ಮಾಡಿಕೊಂಡು ರೋಗದಿಂದ ಮುಕ್ತರಾಗಬಹುದು. ಇಲ್ಲಿ ಅತೀ ಹೆಚ್ಚು ಜೋಳ, ಸಜ್ಜೆ ಬಳಕೆ ಮಾಡುತ್ತೇವೆ. ಆದರೆ ಇಂದಿನ ಯುವ ಪೀಳಿಗೆ ಪಾಸ್ಟ್ ಫುಡ್ ಬಳಕೆಯಿಂದ ಪೌಷ್ಟಿಕತೆಯ ಕೊರತೆಯಿಂದ ಬಳಲುತ್ತಿದ್ದಾರೆ. ಸಿರಿಧಾನ್ಯ ಬಳಕೆ ಮಾಡುವುದರಿಂದ ನಮ್ಮ ರೈತರಿಗೆ ಬೆಂಬಲ ನೀಡಬಹುದು.

ಇಂತಹ ಕಾರ್ಯ ಮಾಡುತ್ತಿರುವ ಧರ್ಮಸ್ಥಳದ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರಿಗೆ ಕೋಟಿ ಕೋಟಿ ನಮನಗಳು ಎಂದು ಸಂತೋಷ ವ್ಯಕ್ತಪಡಿಸಿದರು.

ಯೋಜನಾಧಿಕಾರಿ ಸಂಗಪ್ಪ ಮಾತನಾಡಿ, ಸಿರಿಧಾನ್ಯ ಬೆಳಸುವಲ್ಲಿ ರೈತರ ಸಂಘಟನೆ ಮಾಡಿ ತರಬೇತಿ ನೀಡಿ ಸಿರಿಧಾನ್ಯ ಬೆಳಸಿ ಖರೀದಿಸಿ ಮೌಲ್ಯವರ್ಧನ ಉತ್ಪನ್ನಗಳನ್ನು ರಾಜ್ಯ ವ್ಯಾಪ್ತಿ "ಸಿರಿ ಮಿಲೆಟ್ ಹೌಸ್" ಮುಖಾಂತರ ಕಾರ್ಯ ಮಾಡುತ್ತಿರುವ ಮಲ್ಲಿಕಾರ್ಜುನ ಗಾಣಿಗೇರ ಇವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಪ್ರಕಾಶ್ ರಾಠೋಡ್ ಮತ್ತು ಯೋಜನಾಧಿಕಾರಿ ಸತೀಶ್, ಕೃಷ್ಣಮೂರ್ತಿ, ಸಿರಿಮಿಲೆಟ್ ಹೌಸ್ ಮಾಲಿಕರಾದ ಮಲ್ಲಿಕಾರ್ಜುನ ಗಾಣಿಗೇರ ಶ್ರೀಮತಿ ಸುಮಿತ್ರಾ ಉಪಸ್ಥಿತರಿದ್ದರು. ಸಿರಿಮಿಲೆಟ್ ಮಾರುಕಟ್ಟೆ ಮೇಲ್ವಿಚಾರಕ ಸುನಿಲ್ ಕುಮಾರ್ , ವಲಯ ಮೇಲ್ವಿಚಾರಕರಾದ ಕಲ್ಲಪ್ಪ, ಶ್ರೀಮತಿ ಗಂಗಮ್ಮ , ಮಂಜುಳಾ, ಗಣೇಶ್, ದುರ್ಗಪ್ಪ , ಕೃಷಿ ಮೇಲ್ವಿಚಾರಕರಾದ ಉಮೇಶ್, ವೆಂಕಟೇಶ್ ಮತ್ತು ಸೇವಾ ಪ್ರತಿನಿಧಿಗಳು ಸಹಕರಿಸಿದರು.

# ಸಂಘಗಳ ಪ್ರಗತಿಗೆ ಸ್ಥಳೀಯರ ಸಹಕಾರ ಅಗತ್ಯ: ಭಾಗೋಜಿ ಕೊಪ್ಪದ ಶ್ರೀಗಳು

**ಮೂಡಲಗಿ :** ಸಹಕಾರಿ ಸಂಘ, ಸಂಸ್ಥೆಗಳು ಗ್ರಾಮೀಣ ವಲಯದ ಜನರ ಜೀವನಾಡಿಯಾಗಿವೆ. ಮೂಡಲಗಿ ಸಮೃದ್ಧಿ ಅರ್ಬನ್ ಕ್ರೆಡಿಟ್ ಸೊಸೈಟಿ ಸಮೃದ್ಧವಾಗಿ ಅಭಿವೃದ್ಧಿ ಹೊಂದಲಿ ಎಂದು ಭಾಗೋಜಿಕೊಪ್ಪದ ಡಾ.ಶಿವಲಿಂಗ ಮುರುಘರಾಜೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.



ಸಮೀಪದ ಬೆಟಗೇರಿ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘದ ಕಟ್ಟಡದಲ್ಲಿ ಬುಧವಾರ ನಡೆದ ನಗರದ ಸಮೃದ್ಧಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯ ದ್ವಿತೀಯ ಶಾಖೆಯ ಉದ್ಘಾಟನೆ ನೆರವೇರಿಸಿ ಮಾತನಾಡಿದರು,

ಸಹಕಾರಿ ಸಂಘಗಳು ಪ್ರಗತಿ ಸಾಧಿಸಬೇಕಾದರೆ ಸ್ಥಳೀಯರ ಸಹಾಯ, ಸಹಕಾರ ಅಗತ್ಯ ಎಂದರು.

ಮೂಡಲಗಿ ಸಿದ್ಧ ಸಂಸ್ಥಾನ ಮಠದ ಪೀಠಾಧಿಪತಿ ದತ್ತಾತ್ರೇಯಬೋಧ ಸಾಮೀಜಿ ದಿವ್ಯಸಾನಿಧ್ಯ, ಸುಣಧೋಳಿ ಜಡಿಸಿದ್ಧೇಶ್ವರಮಠದ ಅಭಿನವ ಶಿವಾನಂದ ಮಹಾಸ್ವಾಮೀಜಿ ಸಮಾರಂಭದ ಸಮ್ಮುಖ, ಮೂಡಲಗಿ ಸಮೃದ್ಧಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಪ್ರಧಾನ ಕಛೇರಿ ಅಧ್ಯಕ್ಷ ಸೋಮಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ಶಾಖೆಯ ಉದ್ಘಾಟನೆ ಸಮಾರಂಭ ಶ್ರೀಮಹಾಲಕ್ಷ್ಮಿ, ಶ್ರೀಮಹಾಸರಸ್ವತಿ ಪೂಜೆಯೊಂದಿಗೆ ನಡೆದ ಬಳಿಕ ಶ್ರೀಗಳು, ಗಣ್ಯರು, ಮುಖ್ಯ ಅತಿಥಿಗಳನ್ನು ಈ ವೇಳೆ ಸಮೃದ್ಧಿ ಅರ್ಬನ್ ಕ್ರೆಡಿಟ್ ಸೊಸೈಟಿ ವತಿಯಿಂದ ಸತ್ಕರಿಸಲಾಯಿತು.

ರಾಜಕೀಯ ಧುರೀಣ ಭೀಮಪ್ಪ ಗಡಾದ, ಬಿ.ಬಿ.ಹಂದಿಗುಂದ, ಬಸವಂತ ಕೋಣಿ, ಸೈದಪ್ಪ ಗದಾಡಿ, ಸಲಹಾ ಸಮಿತಿ ಅಧ್ಯಕ್ಷ ಈರಯ್ಯ ಹಿರೇಮಠ, ಲಕ್ಷ್ಮಣ ನೀಲಣ್ಣವರ, ಜಗದೀಶ ಗಾಣಗೇರ, ರಮೇಶ ಪಾಟೀಲ, ಅರ್ಜುನ ದೇಯಣ್ಣವರ, ಶಿವಬೋಧ ಹಿರೇಮಠ, ಮಹಾಂತೇಶ ಮಾಳೇದ, ವೀರಣ್ಣ ಗಣಾಚಾರಿ, ಎನ್.ಎ.ನೀಲಣ್ಣವರ, ಮೂಡಲಗಿ ಸಮೃದ್ಧಿ ಅರ್ಬನ್ ಕ್ರೆಡಿಟ್ ಸೊಸೈಟಿ ಪ್ರಧಾನ ಕಛೇರಿ ಆಡಳಿತ ಮಂಡಳಿ ಅಧ್ಯಕ್ಷರು, ಸದಸ್ಯರು, ಬೆಟಗೇರಿ, ಕೌಜಲಗಿ ಶಾಖೆಯ ಸಲಹಾ ಸಮಿತಿ ಅಧ್ಯಕ್ಷ, ಸದಸ್ಯರು, ಸಿಬ್ಬಂದಿ, ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ವಿವಿಧ ಸಂಘ, ಸಂಸ್ಥೆಗಳ ಹಾಲಿ ಮತ್ತು ಮಾಜಿ ಅಧ್ಯಕ್ಷರು, ಸದಸ್ಯರು, ಗಣ್ಯರು, ಸ್ಥಳೀಯರು, ಇತರರು ಇದ್ದರು.

# ಎನ್.ಶಶಿಕುಮಾರ ಹು.ಧಾ ಪೊಲೀಸ್ ಕಮಿಷನರ್

**ಹುಬ್ಬಳ್ಳಿ :** ಹುಬ್ಬಳ್ಳಿ-ಧಾರವಾಡ ಮಹಾನಗರ ಪೊಲೀಸ್ ಆಯುಕ್ತರಾಗಿ ಎನ್. ಶಶಿಕುಮಾರ ಅವರನ್ನು ನೇಮಕ ಮಾಡಿ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

2007ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಆಗಿರುವ ಶಶಿಕುಮಾರ ಅವರು, ಬೆಂಗಳೂರಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಐಜಿಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಅಪರಾಧ ಮತ್ತು ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿಯಾಗಿದ್ದ ಐಪಿಎಸ್ ಅಧಿಕಾರಿ ಕುಶಾಲ್ ಚೌ-ಕ್ಸೆ ವರ್ಗಾವಣೆಯಾಗಿದ್ದು ತೆರವಾದ ಅವರ ಸ್ಥಾನಕ್ಕೆ ಗುಪ್ತಚರ ಇಲಾಖೆಯಲ್ಲಿ ಎಸ್ಪಿ ಆಗಿದ್ದ ಐಪಿಎಸ್ ಅಧಿಕಾರಿ ಮಹಾನಿಂಗ ನಂದಗಾವಿ ಅವರನ್ನು ನಿಯೋಜಿಸಲಾಗಿದೆ. ನೂತನ ಕಮಿಷನರ್ ಮತ್ತು ಡಿಸಿಪಿ ಇಂದು ಅಧಿಕಾರ ಸ್ವೀಕರಿಸುವ ಸಾಧ್ಯತೆಯಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಹು-ಧಾ ಪೊಲೀಸ್ ಆಯುಕ್ತರಾಗಿದ್ದ ರೇಣುಕಾ ಸುಕುಮಾರ್ ಅವರನ್ನು ಬೆಂಗಳೂರಿನ ಅಪರಾಧ ವಿಭಾಗಕ್ಕೆ ಎಐಜಿಪಿ ಯಾಗಿ ಹಾಗೂ ಡಿಸಿಪಿಯಾಗಿದ್ದ ಕುಶಾಲ ಚೌಕ್ಸೆ ಅವರನ್ನು ಚಿಕ್ಕಬಳ್ಳಾಪುರ ಜಿಲ್ಲೆಗೆ ಎಸ್ಪಿಯಾಗಿ ವರ್ಗಾವಣೆ ಮಾಡಲಾಗಿದೆ.

# ಪತ್ರಿಕೋದ್ಯಮ ಒಂದು ಪವಿತ್ರ ಧರ್ಮ: ಗೋಪಾಲ ನಾಯಕ

**ವಿಜಯಪುರ :** ಪತ್ರಿಕೋದ್ಯಮ ಎನ್ನುವುದೇ ಒಂದು ಪವಿತ್ರ ಧರ್ಮವಾಗಿದ್ದು ಇದರಲ್ಲಿ ನಾವು ನಿಸ್ವಾರ್ಥವಾಗಿ ಸೇವೆ ಸಲ್ಲಿಸುವುದರ ಮೂಲಕ ಅದನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದು ನಗರದ ಹಿರಿಯ ಪತ್ರಕರ್ತ ಗೋಪಾಲ ನಾಯಕ ಹೇಳಿದರು.



ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ಇತಿಹಾಸ ಅಧ್ಯಯನ ವಿಭಾಗದ ವತಿಯಿಂದ ಸೋಮವಾರ ಆಯೋಜಿಸಿದ್ದ 'ಪತ್ರಿಕಾ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾಧ್ಯಮದಲ್ಲಿ ಪತ್ರಿಕೆಗಳು ವಿಶಾಲವಾಗಿ ಬೆಳೆದಿದ್ದು, ಇದರಲ್ಲಿ ತಂತ್ರಜ್ಞಾನದ ಪ್ರಭಾವ ಕೂಡಾ ಜಾಸ್ತಿಯಾಗಿವೆ. ಇಂದು ಪತ್ರಿಕೋದ್ಯಮದಲ್ಲಿ ಬರುವ ಸುದ್ದಿಗಳೇ ನಿಜವಾದ ಹಾಗೂ ಸತ್ಯ ಸತ್ಯಾಂಶವುಳ್ಳ ಸುದ್ಧಿಗಳು ಎಂದು ಹೇಳಲು ನನಗೆ ಹೆಮ್ಮೆ ಅನಿಸುತ್ತದೆ. ಪತ್ರಿಕೆಗಳು ಜನಪರವಾಗಿದ್ದು, ಜನರ ಸಮಸ್ಯೆಗಳನ್ನು ಬಗೆಹರಿಸಿ ಸರಕಾರದ ಗಮನ ತರುವುದೇ ಇದರ ಗುರಿಯಾಗಿದೆ. ಪತ್ರಿಕೆಗಳು ಜನ ಮತ್ತು ಸರಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡಬೇಕು. ಪತ್ರಿಕೆಗಳಲ್ಲಿ ಕೆಲಸ ಮಾಡುವಾಗ ಅನೇಕ ಅಡತಡೆಗಳು ಬಂದರೂ ಅವುಗಳನ್ನು ಎದುರಿಸಿ ನಿಲ್ಲಬೇಕು ಎಂದರು.

ಇದೇ ಸಂದರ್ಭದಲ್ಲಿ ಕತಾರನ ಮಾಧ್ಯಮ ತಜ್ಞೆ ಮಾಗೇಶ್ವರಿ ಮಾತನಾಡಿ, ಕನ್ನಡ ಭಾ?ಯ ಪ್ರಚಾರ ನಿಜಕ್ಕೂ ಶ್ಲಾಘನೀಯ. ಇಂದು ನಾವು ಕನ್ನಡ ಪತ್ರಿಕೋದ್ಯಮದ ಪರಂಪರೆಯನ್ನು ಆಚರಿಸುತ್ತಿದ್ದು, ಇದರ ಜವಾಬ್ದಾರಿ ಕೂಡ ನೆನಪಿಸಿಕೊಳ್ಳುವ ಸಮಯ. ವಿದ್ಯಾರ್ಥಿನಿಯರು ನಾಳೆಯ ಬೆಳಕಾಗಿದ್ದು ಧೈರ್ಯದಿಂದ ಹೊರಹೊಮ್ಮಬೇಕು. ಇಂದಿನ ತಂತ್ರಜ್ಞಾನದ ಕ್ಷಿಪ್ರ ಪ್ರಗತಿಗೆ ಸಾಕ್ಷಿಯಾಗಿರುವಂತೆ ಪತ್ರಕರ್ತರು ಶ್ರಮಿಸಬೇಕಾಗಿದೆ. ಕೃತಕ ಬುದ್ಧಿಮತ್ತೆಯ,

ವರ್ಚುವಲ್ ರಿಯಾಲಿಟಿ ಮತ್ತು ಮಲ್ಟಿಮೀಡಿಯಾ ಸ್ಟೋರಿ ಹೀಗೆ ಹತ್ತು ಹಲವು ತಂತ್ರಜ್ಞಾನಗಳು ಕಣ್ಣಮುಂದೆ ಇದ್ದು ಅದನ್ನು ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿದ ಮಹಿಳಾ ವಿವಿಯ ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲ ಮಾತನಾಡಿ, ಪತ್ರಿಕೆಯಲ್ಲಿ ಎಷ್ಟೋ ಮಹನಿಯರ ಸಾಧನೆ ಆಗಾಧವಾಗಿದೆ. ಅವರಿಗೆ ಈ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸಿ, ಇಂದು ಕನ್ನಡ ಪತ್ರಿಕಾ ದಿನಾಚರಣೆಯನ್ನು ಸಂಭ್ರಮಿಸಬೇಕಾಗಿದೆ. ಇಂದು ಮಾಧ್ಯಮ ಎಂಬುದು ಪ್ರತಿಯೊಂದು ಕ್ಷೇತ್ರಕ್ಕೂ ಅವಶ್ಯಕತೆಯಿದೆ. ಪತ್ರಿಕೋದ್ಯಮದಲ್ಲಿ ಸಾಕಷ್ಟು ಪೈಪೋಟಿ ಇದ್ದರೂ, ಎಲ್ಲಾ ಪತ್ರಿಕೆಯನ್ನು ಎದುರಿಸಿ ತನ್ನದೇ ಆದ ಸ್ಥಾನವನ್ನು ಗಟ್ಟಿಯಾಗಿ ಉಳಿಸಿಕೊಂಡು ಕನ್ನಡ ಪತ್ರಿಕೆಗಳು ನಿಂತಿವೆ. ಮಿಡಿಯಾ ಎನ್ನುವುದು ಜಗತ್ತಿನಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವ ಉದ್ಯಮವಾಗಿದೆ.

ಇಲ್ಲಿಯೂ ಕೂಡ ಒಳ್ಳೆಯ ಭವಿಷ್ಯ ಕಟ್ಟಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ತಂತ್ರಜ್ಞಾನ ಯುಗದಲ್ಲಿ ಹಲವಾರು ರೀತಿಯ ಕಾರ್ಯಚಟುವಟಿಕೆಗಳನ್ನು ಪತ್ರಿಕೋದ್ಯಮದಲ್ಲಿ ನೋಡುವುದರಿಂದ ಸಾಕಷ್ಟು ಉದ್ಯೋಗವಕಾಶಗಳನ್ನು ಪಡೆಯಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಇತಿಹಾಸ ವಿಭಾಗದ ಅತಿಥಿ ಉಪನ್ಯಾಸಕರಾದ ಚಂದ್ರಕಲಾ ಹಳ್ಳಿ ಹಾಗೂ ಗುರುರಾಜ ಬೋಮನಹಳ್ಳಿ, ವಿವಿಯ ವಿವಿಧ ವಿಭಾಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಮತ್ತು ಸ್ನಾತ-ಕೋತ್ತರ ವಿದ್ಯಾರ್ಥಿನಿಯರು ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿವಿಯ ಇತಿಹಾಸ ಅಧ್ಯಯನ ವಿಭಾಗದ ಸಂಯೋಜ-ಕ ಡಾ. ಸುರೇಶ ಕೆ.ಪಿ ಸ್ವಾಗತಿಸಿದರು. ಸಂಶೋಧನಾ ವಿದ್ಯಾರ್ಥಿನಿಯರಾದ ಸುಷ್ಮಾ ಪವಾರ ಮತ್ತು ಫಿಲೋಮಿನಾ ಅತಿಥಿಯರನ್ನು ಪರಿಚಯಿಸಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಂದೀಪ ಪ್ರಾಸ್ತಾವಿಕ ನುಡಿಗಳನ್ನಾಡಿಗಳನ್ನಾಡಿದರು. ಇತಿಹಾಸ ವಿಭಾಗದ ಪ್ರಾಧ್ಯಾಪಕ ಡಾ. ಎಮ್.ಎಸ್. ಮುಜಾವರ ವಂದಿಸಿದರು, ಸಹಾಯಕ ಪ್ರಾಧ್ಯಾಪಕಿ ಡಾ. ತಹಮೀನ ನಿಗಾರ್ ಸುಲ್ತಾನಾ ಕಾರ್ಯಕ್ರಮವನ್ನು ನಿರೂಪಿಸಿದರು.

# ಜೀವ ರಕ್ಷಣೆಯಲ್ಲಿ ವೈದ್ಯರ ಕೊಡುಗೆ ಅನನ್ಯ: ಡಾ. ಹೀನಾ

**ವಿಜಯಪುರ :** ಅನಾರೋಗ್ಯಕ್ಕೆ ತುತ್ತಾದ ಪ್ರತಿಯೊಬ್ಬ ರೋಗಿಯನ್ನು ಚಿಕಿತ್ಸೆ ನೀಡುವ ಮೂಲಕ ಗುಣಪಡಿಸಿ ಮತ್ತು ಪ್ರಾಣ ರಕ್ಷಣೆ ಮಾಡಿ ಅವರಿಗೆ ಪುನರ್ಜನ್ಮ ನೀಡುವಲ್ಲಿ ವೈದ್ಯರ ಕೊಡುಗೆ ಅನನ್ಯವಾದುದು. ಪಶ್ಚಿಮ ಬಂಗಾಲದ ಎರಡನೆಯ ಮುಖ್ಯಮಂತ್ರಿ ಹಾಗೂ ಶ್ರೇಷ್ಠ ವೈದ್ಯರೆಂದೇ ಹೆಸರುವಾಸಿಯಾಗಿದ್ದ ಡಾ. ಬಿಧನ್ ಚಂದ್ರ ರಾಯ್ ಅವರ ಜನ್ಮದಿನ ಜುಲೈ 1 ರಂದು ರಾಷ್ಟ್ರದೆಲ್ಲೆಡೆ ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತಿದೆ. ಅವರು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಸಂಸ್ಥೆಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹೀಗಾಗಿ 1991 ರಲ್ಲಿ ಮೊಟ್ಟಮೊದಲಿಗೆ ಭಾರತದಲ್ಲಿ ಜುಲೈ 1 ರಂದು ವೈದ್ಯರ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು ಎಂದು ಡಾ. ಹೀನಾ ಸಾಹೇಬಾ ಅವರು ಅಭಿಪ್ರಾಯಪಟ್ಟರು.



ನಗರದ ಅಲ್-ಅಮೀನ್ ಆಸ್ಪತ್ರೆಯಲ್ಲಿ ವಿದ್ಯಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಮಕ್ಕಳಿಂದಆಚರಿಸಲ್ಪಟ್ಟರಾಷ್ಟ್ರೀಯ ವೈದ್ಯರ ದಿನದ ಅಂಗವಾಗಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ವೈದ್ಯಕೀಯವಿಜ್ಞಾನಕ್ಷೇತ್ರದಲ್ಲಿಡಾ. ಬಿ.ಸಿ.ರಾಯ್ ಅವರು ನೀಡಿರುವ ಅಮೂಲ್ಯವಾದ ಕೊಡುಗೆಯನ್ನು ಇಂದು ಸ್ಮರಿಸಲೇ ಬೇಕು. ಕೋವಿಡ್‌ನಂತಹ ಕಾಲಘಟ್ಟದಲ್ಲಿ ತಮ್ಮ ವೈದ್ಯರು ಪ್ರಾಣವನ್ನೇ ಪಣಕ್ಕಿಟ್ಟು ಜೀವನ್ಮರಣ ಮಧ್ಯೆ ಹೋರಾಡುತ್ತಿರುವ ರೋಗಿಗಳ ಪ್ರಾಣ ರಕ್ಷಣೆಯಲ್ಲಿ ಮತ್ತು ಅಗತ್ಯ ವೈದ್ಯಕೀಯ ಸೇವೆ ನೀಡುವಲ್ಲಿ ಶ್ರಮಿಸಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ ಎಂದರು.

ಈಕಾರ್ಯಕ್ರಮದಲ್ಲಿವಿದ್ಯಾಆಂಗ್ಲ ಮಾಧ್ಯಮ ಶಾಲೆಯ ಕ್ರಿಯೇಟಿವ್ವ ಚೈಲ್ಡ್ ಸಮರ್ಥ ಖೊದ್ನಾಪೂರ ಈತನು ಸ್ವಯಂ ತಯಾರಿಸಿದ ವೈದ್ಯರ ದಿನಾಚರಣೆಯ ಬಗೆಗಿನ ಸಂದೇಶದ ಇಮೇಜ್ ವೈದ್ಯರಿಗೆ ನೀಡಿ ಶುಭಾಶಯ ಕೋರಿದನು. ಮಕ್ಕಳು ವೈದ್ಯರುಗಳಿಗೆ ಪುಷ್ಪ ನೀಡಿ ವೈದ್ಯರ ದಿನದ ಪ್ರಯುಕ್ತ ಶುಭಾಶಯ ಕೋರಿದರು. ನಂತರ ಶಾಲೆಯ ಮಕ್ಕಳಿಗೆ ಆಸ್ಪತ್ರೆಯ ವಿವಿಧವಿಭಾಗಗಳು, ಪ್ರಾಯೋಗಿಕ ಲ್ಯಾಬೋರೇಟರಿ ಮತ್ತು ಇನ್ನಿತರ ಮಾಹಿತಿಯನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಆಸ್ಪತ್ರೆಯ ಟ್ರಸ್ಟಿಇವರುವಿದ್ಯಾಆಂಗ್ಲಮಾಧ್ಯಮ ಶಾಲೆಯ ಎಲ್ಲ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಉಚಿತವಾಗಿ ಆರೋಗ್ಯ ತಪಾಸಣೆಯ ಸೌಲಭ್ಯವನ್ನು ಒದಗಿಸಲಾಗುವುದು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಅಧೀಕ್ಷಕ ವೈದ್ಯಾಧಿಕಾರಿಗಳಾದ ಡಾ. ಜಿಲಾನಿ, ಡಾ. ಬಿಲಾಲ ಹಾಗೂ ಮುಖ್ಯೋಪಾಧ್ಯಾಯಿನಿ ದಿಲಶಾದ್ ಬದಾಮಿ, ಶಿಕ್ಷಕಿಯರಾದ ಸನಾ ಕೌಸರ್, ಮುಸ್ಕಾನ್, ತಸ್ಲೀಂ, ಡಿ.ಎಂ. ಅನೀತಾ, ಸರೋಜಿನಿ, ದಾನಮ್ಮ ಹಾಗೂ ಇತರರು ಉಪಸ್ಥಿತರಿದ್ದರು.

# ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ

**ಮೂಡಲಗಿ:** ಯಾದವಾಡಹಾಗೂ ಸುತ್ತಮುತ್ತಲಿನ ಬಡರೋಗಿಗಳಿಗೆ ಅನುಕೂಲವಾಗಲು ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡವನ್ನು ಸಾರ್ವಜನಿಕರಿಗೆ ಅರ್ಪಿಸಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು.



ಸಾರ್ವಜನಿಕರ ಮನವಿ ಮೇರೆಗೆ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಾಗಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ತಾಲೂಕಿನ ಯಾದವಾಡ ಗ್ರಾಮದಲ್ಲಿ ಸೋಮವಾರ ಸಂಜೆ ಶಾಸಕ ಬಾಲಚಂದ್ರ ಜಾರಕಿಹೊಳಿ, ದಾಲ್ಮೀಯಾ ಸಿಮೆಂಟ್ (ಭಾರತ) ಲಿಮಿಟೆಡ್ ಹಾಗೂ ಮೂಡಲಗಿ ತಾಲೂಕು ಪಂಚಾಯತಿ ಇವರುಗಳ ವಿಶೇಷ ಅನುದಾನದಲ್ಲಿ ಸುಮಾರು 70 ಲಕ್ಷ ರೂಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಯಾದವಾಡ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲುಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹೇಳಿದರು.

ಕೋವಿಡ್ ಸಂದರ್ಭದಲ್ಲಿ ರೋಗಿಗಳಿಗೆಉಚಿತಚಿಕಿತ್ಸೆನೀಡಲು ಈ ಭಾಗದಲ್ಲಿ ಶಿಥಿಲಗೊಂಡಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪುನ:ಶ್ಚೇತನ ನೀಡಲು ಹೊಸ ಕಟ್ಟಡವನ್ನು ನಿರ್ಮಿಸಲು ಯೋಜಿಸಿದ್ದೇವು. ಅದರಂತೆ ಸಾರ್ವಜನಿಕರ ಹಿತವನ್ನು ಗಮನದಲ್ಲಿಟ್ಟುನಾನು,ದಾಲ್ಮೀಯಾ ಸಿಮೆಂಟ್ ಕಾರ್ಖಾನೆ ಹಾಗೂ ತಾಲೂಕು ಪಂಚಾಯತಿದವರು ಇದಕ್ಕಾಗಿ ಅನುದಾನವನ್ನು ನೀಡಿದ್ದೇವೆ. ಅದಕ್ಕಾಗಿ ಸಾಮಾಜಿಕ ಕಾರ್ಯಗಳಿಗೆ ಹೆಸರುವಾಸಿಯಾದ ದಾಲ್ಮೀಯಾ ಕಾರ್ಖಾನೆಗೆ ಕೃತಜ್ಞತೆ ಸಲ್ಲಿಸುವುದಾಗಿ ಅವರು ತಿಳಿಸಿದರು.

ಅರಭಾವಿ ಕ್ಷೇತ್ರದಲ್ಲಿ ಎಲ್ಲ ಸಮಾಜಗಳ ಬಾಂಧವರು ಅಣ್ಣ-ತಮ್ಮಂದಿರರಂತೆ ಬಾಳುತ್ತಿದ್ದಾರೆ. ಪರಸ್ಪರ ಸಹೋದರತ್ವ ಮನೋಭಾವನೆಯಿಂದ ಬದುಕುತ್ತಿದ್ದೇವೆ. ಗ್ರಾಮಾಭಿವೃದ್ದಿಗೆ ಎಲ್ಲರೂ ಒಂದಾಗಿ ಒಗ್ಗಟ್ಟಿನಿಂದ ದುಡಿಯಬೇಕು. ಅಂದಾಗ ಮಾತ್ರ ಅಭಿವೃದ್ಧಿಸಾಧ್ಯವಾಗುತ್ತದೆಎಂದು ಅವರು ಹೇಳಿದರು.

ವೇದಿಕೆಯಲ್ಲಿ ಪ್ರಭಾತಕುಮಾರ ಸಿಂಗ್, ಬಸವರಾಜ ಭೂತಾಳಿ, ಮೂಡಲಗಿ ತಾ.ಪಂ ಇಓ ಎಫ್.ಜಿ.ಚಿನ್ನನ್ನವರ, ಎಡಿಎಓ ಡಾ॥ ಈಶ್ವರ ಗಡೇದ, ತಾಲೂಕಾ ಆರೋಗ್ಯಾಧಿಕಾರಿ ಡಾ॥ ಮುತ್ತಣ್ಣ ಕೊಪ್ಪದ, ಡಾ॥ ಆರ್. ಎಸ್.ಬೆಣಚಿನಮರಡಿ, ಬಿಇಓ ಅಜೀತ ಮನ್ನಿಕೇರಿ ಅವರು ಉಪಸ್ಥಿತರಿದ್ದರು.

# ಅನಾಮಧೇಯ ವ್ಯಕ್ತಿ ಸಾವು: ಪ್ರಕರಣ ದಾಖಲು

**ಕೊಪ್ಪಳ :** ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಗಿಣಿಗೇರಾ ಗ್ರಾಮದ ಗಂಗಾವತಿ ಸರ್ಕಲ್ ಹತ್ತಿರ ಸುಮಾರು 30 ರಿಂದ 35 ವರ್ಷದ ಅನಾಮಧೇಯ ವ್ಯಕ್ತಿಯು ಮೃತಪಟ್ಟಿದ್ದು, ಈ ಬಗ್ಗೆ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂನ್ 27ರಂದು ಬೆಳಿಗ್ಗೆ 7 ಗಂಟೆ ಸುಮಾರಿಗೆ ಅನಾಮಧೇಯ ವ್ಯಕ್ತಿಯ ಮೃತ ದೇಹ ಕಂಡು ಬಂದಿರುತ್ತದೆ ಎಂದು ಗಿಣಿಗೇರಾ ಗ್ರಾಮದ ಸಾರ್ವಜನಿಕರು ಪೊಲೀಸ್ ಠಾಣೆಗೆ ಕರೆ ನೀಡಿದ ಕೂಡಲೇ ಪೊಲೀಸರು ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಈ ವ್ಯಕ್ತಿಯು ಯಾವುದೋ ರೋಗದಿಂದ ಮತ್ತು ಹಸಿವಿನಿಂದ ಬಳಲಿ ನಿಶಕ್ತನಾಗಿ ನೀರು, ಊಟ ಇಲ್ಲದೇ ಮೃತಪಟ್ಟ ಬಗ್ಗೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ಮೃತ ವ್ಯಕ್ತಿಯ ಸಂಬಂಧಿಕರು ಹಾಗೂ ವಾರಸುದಾರರಿದ್ದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ದೂ.ಸಂ: 08539-230111, ಕೊಪ್ಪಳ ಡಿ.ಎಸ್.ಪಿ ದೂ.ಸಂ: 08539-222433, 9480803720, ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ ದೂ.ಸಂ: 9480803746 ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಮಾಜಿಕ ಕಾರ್ಯಗಳತ್ತ ಧಾರ್ಮಿಕ ಟ್ರಸ್ಟ್‌ಗಳು



**ರಬಕವಿ :** ಧಾರ್ಮಿಕ ಟ್ರಸ್ಟ್ ಗಳು ಸಾಮಾಜಿಕ ಕಾರ್ಯಕ್ರಮಗಳತ್ತ ಗಮನ ನೀಡಿ ಕಡು ಬಡತನದ ಮಕ್ಕಳಿಗೆ ಸಹಾಯ ಹಸ್ತ ನೀಡುತ್ತಿರುವುದು ಶ್ರೇಷ್ಠವಾದ ಕಾರ್ಯವಾಗಿದೆ. ದಾನಮ್ಮಾದೇವಿ ಗುಡಿ ಟ್ರಸ್ಟ್ ವತಿಯಿಂದ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಒಂದು ವರ್ಷಕ್ಕಾಗುವಷ್ಟು ನೋಟ್ ಬುಕ್ ವಿತರಣೆ ಮಾಡಲಾಯಿತು. ಮಕ್ಕಳು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ನಿವೃತ್ತ ಉಪನ್ಯಾಸಕ ಪ್ರೊ. ಎಂ. ಎಸ್. ಬದಾಮಿ ತಿಳಿಸಿದರು.

ಶುಕ್ರವಾರ ಇಲ್ಲಿನ ದಾನಮ್ಮ ದೇವಿ ಸಭಾ ಭವನದಲ್ಲಿ ದಾನಮ್ಮ ದೇವಿ ಟ್ರಸ್ಟ್ ಮತ್ತು ತಾಲ್ಲೂಕು ಕಸಾಪ ಘಟಕ ಹಮ್ಮಿಕೊಂಡ ನೋಟ್ ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಬಕವಿ ಬನಹಟ್ಟಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ. ಕೃ. ಮೇಗಾಡಿ ಮಾತನಾಡಿ, ರಬಕವಿ ಬನಹಟ್ಟಿ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯಿಕ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ಕಾರ್ಯಗಳತ್ತ ಗಮನ ನೀಡುತ್ತಿದೆ. ಈ ನಿಟ್ಟಿನಲ್ಲಿ ದಾನಮ್ಮದೇವಿ ಟ್ರಸ್ಟ್ ಜೊತೆಗೂಡಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಪೆನ್ ವಿತರಣೆ ಮಾಡುತ್ತಿರುವುದು ಸ್ತುತ್ಯವಾದ ಕಾರ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವಜ ಕಾಡದೇವರ, ಶಿವಾನಂದ ದಾಶ್ಯಾಳ ಮಾತನಾಡಿದರು.

ಟ್ರಸ್ಟ್ ಅಧ್ಯಕ್ಷ ಶಿವಜಾತ ಉಮದಿ ಅಧ್ಯಕ್ಷತೆ ವಹಿಸಿದ್ದರು. ನಾರಾಯಣ ಬೋರಗಿನಾಯಕ, ಬಸವರಾಜ ಯೆಂಡಿಗೇರಿ, ಶಿವಾನಂದ ಬಾಗಲಕೋಟಮಠ, ಚಿದಾನಂದ ಗಾಳಿ, ಪ್ರಭು ಉಮದಿ, ಮಲ್ಲೇಶಪ್ಪ ಕುಚನೂರ, ಬಸವರಾಜ ದಲಾಲ, ಡಾ. ರವಿ ಜಮಖಂಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ತಾಂತ್ರಿಕ ವಿದ್ಯಾರ್ಥಿಗಳು ಭಾರತಕ್ಕೆ ಉತ್ತಮ ಕೊಡುಗೆ ನೀಡಲಿ: ಸಿದ್ನಾಳ




**ಮಹಾಲಿಂಗಪುರ :** ತಂತ್ರಜ್ಞಾನವನ್ನೇ ಜೀವನದ ಗುರಿಯಾಗಿಸಿಕೊಂಡಿರುವ ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳು ತಮ್ಮ ಉತ್ತಮ ತಂತ್ರಗಳಿಂದ ಭವ್ಯ ಭಾರತಕ್ಕೆ ಉತ್ತಮ ಕೊಡುಗೆ ನೀಡುವಂತಾಗಲಿ ಎಂದು ಪ್ರೋ.ಶಿವಲಿಂಗ ಸಿದ್ನಾಳ ಹೇಳಿದರು.

ಸ್ಥಳೀಯ ಕೆಎಲ್‌ಇ ಪಾಲಿಟೆಕ್ನಿಕ್ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು ಶಿಕ್ಷಣವೆಂಬುದು ಕೇವಲ ಅಕ್ಷರ ಜ್ಞಾನ ಅಥವಾ ನೌಕರಿ ಪಡೆಯುವ ದತ್ತಾಂಶಗಳ ಸಂಗ್ರಹವಾಗಬಾರದು, ಸ್ವದೇಶಿ ಸಂಸ್ಕೃತಿ, ಸಂಪ್ರದಾಯಗಳು, ಮೌಲ್ಯಾದರ್ಶಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಶಿಕ್ಷಣ ಸಾರ್ಥಕವಾಗುತ್ತದೆ ಎಂದರು.

ಶಿಕ್ಷಕ ನಾರನಗೌಡ ಉತ್ತಂಗಿ ಮಾತನಾಡಿ ಯುವಕರ ಸಾಮಾಜಿಕ ಜವಾಬ್ದಾರಿಗಳು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಮಾತನಾಡಿ, ಇಂದಿನ ಯುಜನಾಂಗ ಅದರಲ್ಲಿಯೂ ವಿದ್ಯಾರ್ಥಿಗಳು ಅತ್ಯಂತ ಜವಾಬ್ದಾರಿಯಿಂದ ವರ್ತಿಸಬೇಕಾಗಿದೆ, ವಿದ್ಯಾರ್ಥಿ ದೆಸೆಯಿಂದಲೇ ಸಾಮಾಜಿಕ ಕಳಕಳಿ,

ಅದಮ್ಯ ದೇಶಾಭಿಮಾನದಿಂದ ಸದಾ ದೇಶದ ಹಿತಕ್ಕಾಗಿ ದುಡಿಯುವ ಹಾಗೂ ಸರ್ವ ತ್ಯಾಗಕ್ಕೂ ಸಿದ್ಧವಾಗಬೇಕಿದೆ. ಶಿಕ್ಷಣ ಪ್ರತಿ ವಿದ್ಯಾರ್ಥಿಯ ದೌರ್ಬಲ್ಯಗಳನ್ನು ಹೊಡೆದೊಡಿಸಿ ಅವನನ್ನು ಪರಾಕ್ರಮಿಯಾಗಿಸಬೇಕು, ಇಡುವ ಪ್ರತಿ ಹೆಜ್ಜೆಯೂ ಸಮಾಜ ಮತ್ತು ರಾಷ್ಟ್ರದ ಒಳಿತು ಮತ್ತು ಅಭಿವೃದ್ಧಿಗೆ ಪೂರಕವಾಗಬೇಕು ಎಂದರು.

ಪ್ರಾಚಾರ್ಯ ಎಸ್.ಐ.ಕುಂದಗೋಳ ಅಧ್ಯಕ್ಷತೆವಹಿಸಿದ್ದರು, ಸಿವ್ಹಿಲ್ ವಿಭಾಗ ಮುಖ್ಯಸ್ಥ ಸುಭಾಸ್ ಮೂಶಿ, ಸವಿತಾ ಬೀಳಗಿ, ಉಪನ್ಯಾಸಕರಾದ ನಿರ್ಮಲಾ ಫಕೀರಪುರ, ಅಂಜನಾ, ಪ್ರಿಯಾ ಸೋನಾರ, ಚೇತನ ಕುಂದರಗಿ, ಈಶ್ವರ ಹೂಲಿ, ಬೋರವ್ವ ಸೊಂಡಿ, ಗುರುರಾಜ ಅಥಣಿ, ಸಾಕ್ಷಿ ಕೋರಿಶೆಟ್ಟಿ, ಲಕ್ಷ್ಮೀ ಅಂಗಡಿ ಸೇರಿದಂತೆ ಹಲವರು ಇದ್ದರು.

# ವಾಲಿಬಾಲ್ ಸಮಾರೋಪ ಸಮಾರಂಭ

## ನಮ್ಮೂರಿಗೆ ಅವಕಾಶ ನೀಡಿದ್ದು ಸಂತಸ: ಡಾ. ಪುಷ್ಪದಂತ



**ತೇರದಾಳ :** ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿ ಹಮ್ಮಿಕೊಳ್ಳಲು ನಮ್ಮೂರಿಗೆ ಅವಕಾಶ ನೀಡಿದ್ದು ತುಂಬಾ ಸಂತಸವಾಗಿದೆ. ನೀಡಿದ ಅವಕಾಶವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ತೃಪ್ತಿ ಸಂಸ್ಥೆಗೆ ಇದೆ ಎಂದು ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ ಹೇಳಿದರು.

ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾಲಯಗಳ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಟ್ರೋಫಿ ವಿತರಿಸಿ ಮಾತನಾಡಿದರು.

ವಿಶ್ವ ವಿದ್ಯಾಲಯದ ವೀಕ್ಷಕ ಡಾ. ಜೋಸೆಫ್ ಅನಿಲಕುಮಾರ, ಪಂದ್ಯಾವಳಿ ಇರಲಿ ಕಾರ್ಯಕ್ರಮ ಇರಲಿ ಆಯೋಜನೆ ಮಾಡುವುದಕ್ಕಿಂತ ವ್ಯವಸ್ಥೆ ಮಾಡುವುದು ಬಹಳ ಮುಖ್ಯವಾಗಿದೆ. ವಾಲಿಬಾಲ್ ಪಂದ್ಯಾವಳಿಯಲ್ಲಿ ದಾನಿಗೊಂಡ ಸಂಸ್ಥೆ ಮಾಡಿದ ವ್ಯವಸ್ಥೆ ನಿಜಕ್ಕೂ ಮಾದರಿಯಾಗಿದೆ. ಎರಡು ಸಾವಿರ ಕ್ರೀಡಾಪಟುಗಳಿಗೆ ಸೌಲಭ್ಯ ಒದಗಿಸುವುದು ಸಾಮಾನ್ಯ ಕೆಲಸವಲ್ಲ ಎಂದು ಬಣ್ಣಿಸಿದರು.

ಮುಧೋಳದ ಖ್ಯಾತ ತಜ್ಞ ಡಾ. ಉದಯಕುಮಾರ ನಾಯಕ ಅತಿಥಿಗಳಾಗಿ ಆಗಮಿಸಿದ್ದರು. ಸಂಸ್ಥೆ ಚೇರಮನ್

ಡಾ. ಮಹಾವೀರ ದಾನಿಗೊಂಡ, ಪ್ರಾಚಾರ್ಯ ಡಾ. ಪಿ.ಬಿ. ಅಪರಾಜ, ದೈಹಿಕ ಶಿಕ್ಷಣ ನಿರ್ದೇಶಕ ರಾಮು ಹಾಡಕರ, ಡಾ. ರವಿ ಜಮಖಂಡಿ, ಡಾ. ಉಗಾರೆ, ಆಡಳಿತಾಧಿಕಾರಿ ರಾಜೇಂದ್ರ ಪರೀಟ ಇದ್ದರು.

# ದೇಸಿ ಕ್ರೀಡೆಗಳನ್ನು ಉಳಿಸಿ ಬೆಳೆಸಿ



**ರಬಕವಿ-ಬನಹಟ್ಟಿ :** ವಿದ್ಯಾರ್ಥಿಗಳಲ್ಲಿ ದೇಸಿ ಕ್ರೀಡೆಗಳ ಮಹತ್ವ ಕುರಿತು ಜಾಗೃತಿ ಮೂಡಿಸುವ ಜೊತೆಗೆ ಅವುಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಗಮನ ನೀಡಬೇಕು ಎಂದು ರಾಷ್ಟ್ರೀಯ ಕುಸ್ತಿ ಪಟು ಜಗದಾಳ ಗ್ರಾಮದ ಕಾಡೇಶ ಪಾಟೀಲ ತಿಳಿಸಿದರು.

ಸಮೀಪದ ಜಗದಾಳ ಗ್ರಾಮದ ಕಾನಟ್ಟಿ ತೋಟದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಶಿಕ್ಷಕ ರವೀಂದ್ರ ಸಂಪಗಾವಿ ಮಾತನಾಡಿ, ಕಾಡೇಶ ಇದೇ ಸರ್ಕಾರಿ ಶಾಲೆಯ ವಿದ್ಯಾರ್ಥಿಯಾಗಿದ್ದು , ಗ್ರಾಮೀಣ ಪ್ರದೇಶದಲ್ಲಿ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು ಅವರಿಗೆ ಸೂಕ್ತ ಪ್ರೋತ್ಸಾಹ, ಬೆಂಬಲ ದೊರೆತರೆ ರಾಷ್ಟ್ರ ಮಟ್ಟದಲ್ಲಿಯೂ ಹೆಸರು ಮಾಡಬಹುದಾಗಿದೆ ಎಂದು ತಿಳಿಸಿದರು.

ಮುಖ್ಯ ಶಿಕ್ಷಕ ರಾಮಣ್ಣ ವಡ್ಡರ ಮಾತನಾಡಿ, ವಿದ್ಯಾರ್ಥಿಗಳು ತಾವು ಕಲಿತ ಶಾಲೆ, ತಂದೆ ತಾಯಿ ಮತ್ತು ತಮ್ಮೂರಿಗೆ ಕೀರ್ತಿಯನ್ನು ತರುವ ಕಾರ್ಯವನ್ನು ಮಾಡಬೇಕು ಎಂದು ತಿಳಿಸಿದರು. ಶಿಕ್ಷಕ ಸಿದ್ಧರಾಮಯ್ಯ ಮಠ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಪಂಡಪೂರಕ್ಕೆ ಭಕ್ತರ ಪಾದಯಾತ್ರೆ



**ಮಹಾಲಿಂಗಪುರ :** ಒಂಟಗೋಡಿ ಗ್ರಾಮದ ಪಾಂಡುರಂಗ ವಿಠ್ಠಲ ಭಕ್ತರು ಆಷಾಢ ಮಾಸದ ಏಕಾದಶಿ ನಿಮಿತ್ಯ ಭಜನೆ ಮಾಡುತ್ತಾ ಮಹಾಲಿಂಗಪುರ ಮಾರ್ಗವಾಗಿ ಪಂಡರಪೂರಕ್ಕೆ ಪಾದಯಾತ್ರೆ ತೆರಳಿದರು.ಪಟ್ಟಣದ ವಿದ್ಯಾನಗರದಲ್ಲಿ ಮುಖಂಡರಾದ ಆರ್.ಟಿ.ಪಾಟೀಲ ಅವರ ಮನೆಯಲ್ಲಿ ಭಕ್ತರಿಗಾಗಿ ಪೂಜೆ ಮತ್ತು ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

# ವಿಪತ್ತು ನಿರ್ವಹಣೆಗಾಗಿ ಸೂಕ್ತ ಮುಂಜಾಗ್ರತಾ ಕ್ರಮ ಅಗತ್ಯ: ಈರಣ್ಣ ದಡ್ಡಿ



**ಮಹಾಲಿಂಗಪುರ:** ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಜಿಲ್ಲೆಯಲ್ಲಿ ಮಳೆಯಾಗಿ ಮತ್ತು ಅಂತರಾಜ್ಯದಲ್ಲಿ ಮಳೆಯಾಗಿ ಕೃಷ್ಣಾ ಮತ್ತು ಘಟಪ್ರಭಾ ನದಿಗಳಿಗೆ ಪ್ರವಾಹ ಬಂದು ಮಹಾಲಿಂಗಪುರ ಸುತ್ತಮುತ್ತಲಿನ ಗ್ರಾಮಗಳು ಪ್ರವಾಹ ಎದುರಿಸುವದರಿಂದ ವಿಪತ್ತು ನಿರ್ವಹಣೆಗೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವದು ಅಗತ್ಯವಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಹೇಳಿದರು.

ಬಾಗಲಕೋಟೆ ಜಿಲ್ಲಾಧಿಕಾರಿಗಳ ಆದೇಶದಂತೆ ಗುರುವಾರ ಸಂಜೆ ಪುರಸಭೆಯಲ್ಲಿ ಜರುಗಿದ ಸ್ಥಳೀಯ ಮಟ್ಟದ ಅಧಿಕಾರಿಗಳ ವಿಪತ್ತು ನಿರ್ವಹಣಾ ಮುಂಜಾಗ್ರತೆಯ ಕ್ರಮಗಳ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಹೊರರಾಜ್ಯಗಳ ಜಲಾಶಯಗಳಿಂದ ನದಿಗಳಿಗೆ ನೀರು ಬಿಡುವದರಿಂದ ಈ ಭಾಗದಲ್ಲಿ ಪ್ರವಾಹ ಪರಿಸ್ಥಿತಿಯು ಉಂಟಾಗುವದರಿಂದ ಜನ, ಜಾನುವಾರು, ಆಸ್ತಿಹಾನಿ, ಪ್ರಾಣಹಾನಿ, ಸಾಂಕ್ರಾಮಿಕ ರೋಗಗಳು ಬಾರದಂತೆ ಮುಂಜಾಗ್ರತೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಪಟ್ಟಿಮಾಡಿ ಜಿಲ್ಲಾಧಿಕಾರಿಗಳಿಗೆ ವರದಿ ನೀಡಲಾಗುವದು ಎಂದರು.

ಸಮುದಾಯ ಆರೋಗ್ಯ ಕೇಂದ್ರದ ಮುಖ್ಯವೈದ್ಯಾಧಿಕಾರಿ ಡಾ.ಸಿ.ಎಂ. ವಜ್ಜರಮಟ್ಟಿ ಮಾತನಾಡಿ ರೋಗರುಜಿನಗಳು ಹರಡದಂತೆ ನಿಯಂತ್ರಣ ಹಾಗೂ ವೈದ್ಯಕೀಯ ಉಪಚಾರವನ್ನು ಸಕಾಲಕ್ಕೆ ಒದಗಿಸಲಾಗುವದು ಎಂದರು.

ಹೆಸ್ಕಾಂನ ಸೆಕ್ಷನ್ ಆಫೀಸರ್ ಆರ್. ಆರ್.ಬಾಗೋಜಿ ಮಾತನಾಡಿ ಮಳೆಗಾಳಿಗೆ ಕಂಬ ಬಿದ್ದರೆ, ತಂತಿಗಳು ಹರಿದರೆ ತಕ್ಷಣ ದುರಸ್ಥಿ ಮಾಡಲಾಗುವದು.ಈಗಾಗಲೇ ಜನನಿಬೀಡ ಪ್ರದೇಶಗಳಲ್ಲಿನ ಟಿಸಿಗಳನ್ನು ಸ್ಥಳಾಂತಿರುವ ಕಾರ್ಯ ಆರಂಭವಾಗಿದೆ. ವಿದ್ಯುತ್ ತಂತಿಗಳಿಗೆ ತಾಗುವ ಗಿಡಗಳನ್ನು ತೆರವುಗೊಳಿಸುವ ಕೆಲಸ ನಡೆದಿದೆ. ವಿದ್ಯುತ್ ಅಪಾಯಕ್ಕೆ ಸಂಬಂಧಿಸಿದ ವಿಷಯಗಳಿದ್ದರೆ ನಮ್ಮ ಗಮಕ್ಕೆ ತನ್ನಿ ಎಂದರು.

ನೀರಾವರಿ ಇಲಾಖೆಯ ಎಸ್‌ಓ ವೆಂಕಟೇಶ ಬೆಳಗಲ್ ಮಾತನಾಡಿ ಕಾಲುವೆಯ ನೀರು ಕೆಂಗೇರಿಮಡ್ಡಿಯ ಬಡಾವಣೆಗಳ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗು ಸಾಧ್ಯತೆ ಇರುವದರಿಂದ, ನೀರು ನಿಲ್ಲದೆ ಅಗತ್ಯ ಮುನ್ನಚ್ಚರಿಕೆವಹಿಸಲಾಗುವದು ಎಂದರು.

ಮಹಾಲಿಂಗಪುರ ಗ್ರಾಮಲೆಕ್ಕಾಧಿಕಾರಿ ಮಂಜು ನೀಲನ್ನವರ ಮಾತನಾಡಿ ಬಿದ್ದ ಮನೆಗಳು ಹಾಗೂ ಶೀಥಿಲಾವಸ್ಥೆಯಲ್ಲಿನ ಮನೆಗಳನ್ನು ಸರ್ವೇ ಮಾಡಿ ವರದಿ ಸಲ್ಲಿಸುತ್ತೇವೆ ಎಂದರು. ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ವ್ಹಿ.ಎಸ್. ಮಂಜೂರಕರ ಮಾತನಾಡಿ ಅಂಗನವಾಡಿ ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಯನ್ನು ಮಾಡುತ್ತೇವೆ ಎಂದರು. ಪುರಸಭೆಯ ವಿಪತ್ತು ನಿರ್ವಹಣಾ ಸಹಾಯವಾಣಿ ಸಿಬ್ಬಂದಿ ಎಸ್.ಎಂ.ಕಲಬುರ್ಗಿ, ಎಂ.ಎಂ. ಮೂಗಳಖೋಡ, ಎಂ.ಕೆ.ದಳವಾಯಿ, ಆರ್.ಕೆ.ಮಾಂಗ ಅವರ ಮೂಲಕ ಅತಿವೃಷ್ಟಿ ವಿಪತ್ತಿನಿಂದಾಗುವ ಅನಾಹುತಗಳನ್ನು ತಡೆಯಲು ಪ್ರಯತ್ನಿಸುತ್ತೇವೆ ಎಂದು ಪುರಸಭೆಯ ವ್ಯವಸ್ಥಾಪಕ ಎಸ್. ಎನ್.ಪಾಟೀಲ ತಿಳಿಸಿದರು.

ಪುರಸಭೆ ಸದಸ್ಯ ಶೇಖರ ಅಂಗಡಿ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವಮಠ ಮಾತನಾಡಿದರು. ಪುರಸಭೆ ಸದಸ್ಯ ರಾಜು ಗೌಡಪ್ಪಗೋಳ, ಶಿಕ್ಷಕ ಎಂ.ಡಿ.ಕಾಮರಡ್ಡಿ, ಗ್ರಾಮಲೆಕ್ಕಾಧಿಕಾರಿ ಟಿ.ಎಂ.ದೇವರಮನಿ, ಬಸರಿಗಿಡದ, ಸಮಾಜ ಕಲ್ಯಾಣ ಇಲಾಖೆಯ ವಿ.ಎ.ಬುದ್ನಿ ಸೇರಿದಂತೆ ವಿವಿಧ ಇಲಾಖೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಮುಖ್ಯ ಮಂತ್ರಿಗಳಿಂದ ಕು. ಶ್ರೀಯಾ ವಿ.ಹೆಗಡೆಗೆ ಪ್ರಥಮ ಬಹುಮಾನ



**ಬೆಂಗಳೂರು :** ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ 3ನೇ ಜುಲೈ 2024 ರಂದು ಕರ್ನಾಟಕ ಸರ್ಕಾರ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ವಿಶ್ವ ಪರಿಸರ ದಿನಾಚರಣೆ ಮತ್ತು ವನಮಹೋತ್ಸವ 2024 ನ್ನು ಆಚರಿಸಲಾಯಿತು. ವಿಶ್ವ ಪರಿಸರ ದಿನದ ಅಂಗವಾಗಿ 4ನೇ ಜೂನ್ 2024 ಶಾಲಾ ಮಕ್ಕಳಿಗೆ ನಡೆಸಿದ ಸ್ಪರ್ಧೆಯಲ್ಲಿ ಪೂರ್ಣಪ್ರಜ್ಞ ಇಂದಿರಾನಗರ ಶಾಲೆಯ ವಿದ್ಯಾರ್ಥಿನಿ ಕುಮಾರಿ ಶ್ರೀಯಾ ವಿ.ಹೆಗಡೆ ಪ್ರಥಮ ಸ್ಥಾನವನ್ನು ಪಡೆದಿದ್ದಾಳೆ. ಇಂದು ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕುಮಾರಿ ಶ್ರೀಯಾಳಿಗೆ ಪ್ರಶಸ್ತಿಯನ್ನು ನೀಡಿ ಅಭಿನಂದಿಸಿದರು. ವೇದಿಕೆಯಲ್ಲಿ ಮುಖ್ಯ ಮಂತ್ರಿಗಳೊಂದಿಗೆ, ಅರಣ್ಯ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಹಾಗು ಸರ್ಕಾರದ ಅನೇಕ ಗಣ್ಯರು ಉಪಸ್ಥಿತರಿದ್ದು ವಿಜೇತ ಮಕ್ಕಳಿಗೆ ಶುಭಹಾರೈಸಿದರು. ಬಹುಮುಖ ಪ್ರತಿಭೆ ಕುಮಾರಿ ಶ್ರೀಯಾ ಹೆಗಡೆ ಕಳೆದ ವರ್ಷ ಬಿಹಾರದ ಪಾಟ್ನಾದಲ್ಲಿ ನಡೆದಿದ್ದ ಯುವ ಪರಿಸರವಾದಿ ಸಮ್ಮೇಳನ 2023 ರಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಬಹುಮಾನ ಪಡೆದಿದ್ದನ್ನು ಇಲ್ಲಿ ಸ್ಮರಿಸಬಹುದು. ಪ್ರಬಂಧ ಸ್ಪರ್ಧೆ, ಚರ್ಚಾಸ್ಪರ್ಧೆ, ಚಿತ್ರಕಲೆ, ಶಾಸ್ತ್ರೀಯ ನೃತ್ಯ ಮತ್ತು ಗಾಯನದಲ್ಲಿ ಈಗಾಗಲೇ ನೂರಾರು ಪ್ರಶಸ್ತಿಗಳನ್ನು ಈ ಬಾಲ ಪ್ರತಿಭೆ ಮುಡಿಗೇರಿಸಿಕೊಂಡಿದ್ದಾಳೆ. ಈಕೆಯ ತಾಯಿ ಕವಯತ್ರಿ ಮತ್ತು ಲೇಖಕಿ ಶ್ರೀಮತಿ ಲತಾ ಕೆ.ಎಸ್. ಹೆಗಡೆ ಹಾಗು ತಂದೆ ಶ್ರೀಯುತ ವೆಂಕಟೇಶ ಹೆಗಡೆಯವರ ಪ್ರೋತ್ಸಾಹದೊಂದಿಗೆ, ಪೂರ್ಣಪ್ರಜ್ಞ ಇಂದಿರಾನಗರ ಶಾಲೆಯ ಕಾರ್ಯದರ್ಶಿಗಳಾದ ಶ್ರೀಯುತ ಎಸ್.ಕೆ.ಭಟ್ ಸರ್ ಪ್ರಾಂಶುಪಾಲರಾದ ಶ್ರೀಮತಿ ಕುಮುದಾ ಡಿ.ಎನ್. ಮೇಡಂ, ಶಿಕ್ಷಕ ವರ್ಗ ಮತ್ತು ಆಡಳಿತ ಮಂಡಳಿಗೆ ಈ ಸಂದರ್ಭದಲ್ಲಿ ಕುಮಾರಿ ಶ್ರೀಯ ಧನ್ಯವಾದಗಳನ್ನು ಅರ್ಪಿಸಿದ್ದಾಳೆ.

# ಸಂಘಟನೆಯಿಂದ ಸಮಾಜ ಬಲಿಷ್ಠವಾಗಲು ಸಾಧ್ಯ: ಗಿರೀಶ ಮುತ್ತೂರ



**ರಬಕವಿ-ಬನಹಟ್ಟಿ :** ಬಣಜಿಗ ಸಮುದಾಯದ ಜನರು ಸರ್ವರೊಡನೆ ಸಹಜೀವನ ನಡೆಸುವ ಮತ್ತು ವಣಿಕ ವೃತ್ತಿಯನ್ನೇ ಬಲವಾಗಿ ನೆಚ್ಚಿಕೊಂಡ ಸಮುದಾಯವಾಗಿದ್ದು, ಸಮಾಜದ ಸಂಘಟನೆಯಲ್ಲಿ ಸಂಪೂರ್ಣ ತೊಡಗಿಕೊಂಡರೆ ಸಮಾಜ ಎಲ್ಲ ವಿಧದಿಂದಲೂ ಬಲಿಷ್ಠವಾಗಲು ಸಾಧ್ಯವಿದೆ ಎಂದು ರಬಕವಿ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗಿರೀಶ ಮುತ್ತೂರ ನುಡಿದರು.

ಗುರುವಾರ ಸಂಜೆ ರಬಕವಿ ವಿದ್ಯಾನಗರದ ಶ್ರೀಕಾಳಿಕಾ ದೇವಾಲಯದಲ್ಲಿ ನಡೆದ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು ಸಮಾಜದ ಸರ್ವರು ಸಮಯಪಾಲನೆಗೆ ಹೆಸರಾದವರಾಗಿದ್ದರು ಸಂಘಟನೆ ಸಮಯದಲ್ಲಿ ತಪ್ಪದೇ ಸಭೆಗಳಲ್ಲಿ ಪಾಲ್ಗೊಂಡು ಸಮುದಾಯದ ಪ್ರಗತಿಗೆ ನೆರವಾಗಬೇಕು. ಬೇರೊಂದು ಸಮುದಾಯದ ಜೊತೆ ತುಲನೆ ಮಾಡಿಕೊಳ್ಳದೇ ಸ್ವಾರ್ಥ ಬದಿಗೊತ್ತಿ ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡಿದರೆ ಯಶಸ್ಸು ಖಂಡಿತ ನಮಗೆ ವಶವಾಗುತ್ತದೆ.

ಸಮಾಜದ ತಾಲೂಕು ಮಟ್ಟದ ಪ್ರತಿಭಾ ಪುರಸ್ಕಾರ ಜು.7ರಂದು ಬನಹಟ್ಟಿಯ ಶ್ರೀಬಸವೇಶ್ವರ ಸಮುದಾಯ ಭವನದಲ್ಲಿ ಜರುಗಲಿದ್ದು, ಎಲ್ಲ ಬಾಂಧವರು ಕುಟುಂಬ ಸಮೇತರಾಗಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಸಮುದಾಯದ ಸದಸ್ಯರು ಬಡತನದ ಕಾರಣಕ್ಕೆ ಶೈಕ್ಷಣಿಕ ಮತ್ತು ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಬಾರದೆಂದು ಆಪತ್ಕಾಲೀನ ನಿಧಿ ಸ್ಥಾಪನೆ ಮಾಡಬೇಕೆಂದು ನಿರ್ಧರಿಸಲಾಗಿದ್ದು, ಎಲ್ಲ ಬಾಂಧವರು ತಮ್ಮ ದುಡಿಮೆಯ ಕೆಲವಷ್ಟು ಭಾಗವನ್ನು ದಾನವಾಗಿ ನೀಡುವ ಮೂಲಕ ನಮ್ಮ ಪರಿವಾರದ ಸಂಕಷ್ಟಕ್ಕೆ ನೆರವಾದ ಬಗ್ಗೆ ಸಂತೃಪ್ತಿ ಹೊಂದಲು ಸಾಧ್ಯವಾಗುತ್ತದೆಂದು ವಿಜಯಕುಮಾರ ಹಲಕುರ್ಕಿ ನೀಡಿದ ಸಲಹೆಗೆ ಒಪ್ಪಿಗೆ ನೀಡಲಾಯಿತು.

ಹಿರಿಯರಾದ ಬಸವರಾಜ ತೆಗ್ಗಿ ಶ್ರೀಬಸವೇಶ್ವರ ಭಾವಚಿತ್ರದೊಡನೆ ಮುಂದಿನ ಎಲ್ಲ ಸಭೆಗಳಲ್ಲಿ ಶರಣೆ ಅಕ್ಕಮಹಾದೇವಿ ಭಾವಚಿತ್ರವನ್ನು ಇಟ್ಟು ಪೂಜಿಸಿ ಕಾರ್ಯಕ್ರಮ ನಡೆಸಬೇಕೆಂದು ಸಲಹೆ ನೀಡಿದರು. ಸಮುದಾಯದ ಸದಸ್ಯರ ಕುಟುಂಬಗಳಲ್ಲಿ ಯಾರಾದರೂ ಮೃತರಾದ ಸಂದರ್ಭದಲ್ಲಿ ಸರ್ವ ಸದಸ್ಯರು ಕಡ್ಡಾಯವಾಗಿ ಭಾಗಿಯಾಗಬೇಕೆಂದು ಮತ್ತು ಅಂತ್ಯಕ್ರಿಯೆಯ ಸಮಯದಲ್ಲಿನ ಕೆಲಸಗಳನ್ನು ಸ್ವಯಂಪ್ರೇರಿತರಾಗಿ ನೆರವೇರಿಸಬೇಕೆಂದು ಗಜಾನನ ತೆಗ್ಗಿ ಕೋರಿದರು. ಅಧ್ಯಕ್ಷತೆ ವಹಿಸಿದ್ದ ವಿಶ್ವಸ್ಥ ಮಂಡಳಿ ಹಿರಿಯ ಚಂದ್ರಶೇಖರ ಹುಲಗಬಾಳಿ ಸಮಾಜದ ಪ್ರತಿ ಸದಸ್ಯರು ನಿರ್ದೇಶಕ ಮಂಡಳಿಯೊಡನೆ ಸಹಕಾರ ನೀಡಬೇಕು. ಕಾಲಕಾಲಕ್ಕೆ ವಂತಿಕೆ ಪಾವತಿಸಿ ತಮ್ಮ ಹೊಣೆಗಾರಿಕೆ ನಿಭಾಯಿಸಬೇಕೆಂದರು. ವಾರ್ಷಿಕ ಲೆಕ್ಕಪತ್ರದ ವಿವರಣೆಯನ್ನು ಉಮೇಶ ಹನಗಂಡಿ ವಿವರಿಸಿದರು. ವೇದಿಕೆಯಲ್ಲಿ ಉಪಾಧ್ಯಕ್ಷ ಸೋಮಶೇಖರ ಕೊಟ್ರಶೆಟ್ಟಿ, ಪ್ರಭಾಕರ ಢಪಳಾಪುರ, ವಿಜಯಕುಮಾರ ನಾಶಿ ಉಪಸ್ಥಿತರಿದ್ದರು. ಮಾಜಿ ನಗರಾಧ್ಯಕ್ಷ ಸಂಜಯ ತೆಗ್ಗಿ, ಚಿದಾನಂದ ಮುತ್ತೂರ, ಬಾಲಚಂದ್ರ ತೆಗ್ಗಿ, ಅಮಿತ್ ನಾಶಿ, ಶ್ರೀಶೈಲ ಕಂಕಣಮೇಲಿ, ಬಸವರಾಜ ದುಂಬಾಳಿ, ಮನೋಹರ ತೆಗ್ಗಿ, ರವೀಂದ್ರ ಅಷ್ಟಗಿ, ಪ್ರಕಾಶ ಪಟ್ಟಣಶೆಟ್ಟಿ ಸೇರಿದಂತೆ ಅನೇಕರಿದ್ದರು.



## ಪುರಸಭೆಯಿಂದ ಧೂಮೀಕರಣ (ಪಾಗಿಂಗ್)

ಮಹಾಲಿಂಗಪುರ: ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಪುರಸಭೆಯಿಂದ ಮುಂಜಾಗ್ರತ ಕ್ರಮವಾಗಿ ಡೆಂಗ್ಯೂ, ಚಿಕನ್ ಗುನ್ಯಾ ಸೇರಿದಂತೆ ಸೊಳ್ಳೆಗಳ ನಿಯಂತ್ರಣಕ್ಕಾಗಿ ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಮಷೀನ ಮೂಲಕ ಧೂಮೀಕರಣ(ಪಾಗಿಂಗ್) ಮಾಡಿಸಲಾಗುತ್ತಿದೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State